ಸಂಪುಟ: 01 ಸಂಚಿಕೆ: 96 ಪುಟ: 04 ಬೆಲೆ: 02 ಮಂಗಳವಾರ ಸೆಪ್ಟೆಂಬರ್ 22 2026 ಮೊ: 7411699198/7406928404

# ಅಜಾತ ಶತ್ರು

ಪ್ರದೀಪಕುಮಾರ
ಸಂಪಾದಕರು

ಜನರ ನುಡಿ.... ಕೊಪ್ಪಳದಿಂದ ಏಕಕಾಲಕ್ಕೆ ಪ್ರಕಟ ಸತ್ಯದ ಧ್ವನಿ...
ಕನ್ನಡ ದಿನ ಪತ್ರಿಕೆ




Volume:01 Issue: 96 Pages:04 Price:02 TUESDAY SEPTEMBER 22 2026 RNI NO: KNKAN/26/A4008 E-mail:ajathashathru2026@gmail.com

## ಸತ್ಯವಾಣಿ ಕಟೋಕ್ತಿ



ವಿಶಾಲವಾದ ಚಿಂತನೆ ವಿಷಾದವನ್ನು ತರುವುದಿಲ್ಲ.ಅಂತರ್ಗತವಾದ ಭಾವಗಳನ್ನು ಉದ್ದೀಪನಗೊಳಿಸಿ ಚಿಂತನರ್ಹ ವಿಚಾರಗಳು ವಿಭಿನ್ನ ದೃಷ್ಟಿಕೋನದಲ್ಲ ಮೂಡುವಂತೆ ಸಹಾಯ ಮಾಡುತ್ತವೆ.

ವಾಣಿ ಭಂಡಾರಿ.

# ಕಸ್ತೂರಿ ರಂಗನ್ ವರದಿ ಒಪ್ಪಲ್ಲ

## ಭೂಮಿ ಬಿಟ್ಟುಕೊಡುವ ಮಾತೇ ಇಲ್ಲ : ಸಿಎಂ



ಬೆಂಗಳೂರು: ರಾಜಕಾರಣವನ್ನು ಬದಿಗಿಟ್ಟು ರೈತರ ಹಿತಕಾಪಾಡಲು ಕಸ್ತೂರಿ ರಂಗನ್ ನೇತೃತ್ವದ ಉನ್ನತ ಮಟ್ಟದ ಕಾರ್ಯನಿರತ ತಂಡ ನೀಡಿರುವ ವರದಿಯ ಬಗ್ಗೆ ವಿಶೇಷ ಚರ್ಚೆ ಮಾಡೋಣ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿಧಾನಸಭೆಯಲ್ಲಿಂದು ತಿಳಿಸಿದರು.

ವಿಶೇಷ ಚರ್ಚೆ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದ ಮುಖ್ಯಮಂತ್ರಿ , ಪ್ರತಿಯೊಬ್ಬ ರೈತರ ರಕ್ಷಣೆ ಮಾಡಬೇಕೆಂಬುದು ನನ್ನ ಬದ್ಧತೆಯಾಗಿದೆ. ಕೇವಲ ಅರಣ್ಯದಂಚಿನಲ್ಲಿರುವ ರೈತರ ಪರಿಸ್ಥಿತಿ ಅಷ್ಟೇ ಅಲ್ಲ ನಾಡಿನ ರೈತರ ಹಿತ ಕಾಪಾಡಬೇಕಿದೆ. ಕೇಂದ್ರಕ್ಕೆ ರಾಜ್ಯದ ನಿಲುವುದನ್ನು ತಿಳಿಸಬೇಕಾಗಿರುವುದರಿಂದ ಈ ವಿಶೇಷ ಚರ್ಚೆಯನ್ನು ನಡೆಸಬೇಕಿದೆ ಎಂದರು. ಕಳೆದ ಅಧಿವೇಶನದಲ್ಲಿ 10 ದಿನಗಳ ಸಮಯವಿದ್ದರೂ ಪ್ರತಿಪಕ್ಷಗಳು ಬಳಸಿಕೊಳ್ಳಲಿಲ್ಲ. ಕಸ್ತೂರಿ ರಂಗನ್ ವರದಿ, ಬರಗಾಲ, ರೈತರ ಸಮಸ್ಯೆಗಳ ಬಗ್ಗೆ ಚರ್ಚಿಸಲು ಅಧಿವೇಶನವನ್ನು ಕರೆಯಲಾಗಿದೆ. ಹುಟ್ಟಿದಾಗ ಭೂಮಿಗೆ ಬರುತ್ತೇವೆ.

ಸತ್ತಾಗಲೂ ಭೂಮಿಗೆ ಹೋಗುತ್ತೇವೆ. ಹೀಗಾಗಿ ಭೂಮಿ ಬಿಟ್ಟುಕೊಡುವ ಮಾತೇ ಇಲ್ಲ ಎಂದರು. ಕಸ್ತೂರಿ ರಂಗನ್ ವರದಿ ಹಿನ್ನೆಲೆಯಲ್ಲಿ ಪಶ್ಚಿಮ ಘಟ್ಟ ಪ್ರದೇಶದಲ್ಲಿ ಜನಾಕ್ರೋಶವಿದೆ. ಆ ಭಾಗದ ಜನರ ಸಮಸ್ಯೆಯನ್ನು ಆಲಿಸಿದ್ದೇನೆ. ಸಾವಿರಾರು ಅರ್ಜಿಗಳು ಬಂದಿವೆ. ಅನೇಕ ಸಲಹೆಗಳನ್ನು ನೀಡಿದ್ದಾರೆ. ಪಶ್ಚಿಮ ಘಟ್ಟದ ಬಡ ಜನರ ಹಿತವನ್ನು ಕಾಪಾಡಬೇಕಾಗಿದೆ ಎಂದು ತಿಳಿಸಿದರು. ಪಶ್ಚಿಮ ಘಟ್ಟ ಪ್ರದೇಶದಲ್ಲಿ ಆರು ನದಿಗಳು ಹುಟ್ಟುತ್ತವೆ. 10 ಜಿಲ್ಲೆಯ ಜನರ ಬದುಕಿಗೆ ಕಸ್ತೂರಿ ರಂಗನ್ ವರದಿಯಿಂದ ಮಾರಕವಾಗಲಿದೆ ಎಂಬ ಭಯದ ವಾತಾವರಣ ಉಂಟಾಗಿದೆ.

19, 252 ಲಕ್ಷ ಚದರ ಕಿ.ಮೀ ವ್ಯಾಪ್ತಿಯಲ್ಲಿದೆ. 960 ಕಿ.ಮೀ ಜಾಗವನ್ನು ಪರಿಸರ ಸೂಕ್ಷ್ಮ ವಲಯಕ್ಕೆ ಸೇರಿಸಲಾಗಿದೆ. ಹೀಗಾಗಿ ವರದಿಯನ್ನು ತಿರಸ್ಕರಿಸಬೇಕೆಂಬ ಒತ್ತಾಯ ತೀವ್ರವಾಗಿದೆ ಎಂದರು. ಉನ್ನತ ಮಟ್ಟದ ತಾಂತ್ರಿಕ ಸಮಿತಿ ರಚಿಸಬೇಕು. ಕೇರಳ ಮಾದರಿ ಇರಬೇಕು. ಪರಿಸರ ಸೂಕ್ಷ್ಮವಲಯ ತೆಗೆಯಬೇಕು, ಬಫರ್ ಜೋನ್ ವಲಯ ಕಾಡಿನ ಗಡಿಯೊಳಗಿರಬೇಕು. ಕಸ್ತೂರಿ ರಂಗನ್ ವರದಿ ತಿರಸ್ಕರಿಸಿ ಎಂಬ ಒತ್ತಾಯ ಬಂದಿವೆ. ನಮ ಆಸ್ತಿ ನಮ ಬದುಕಿಗೆ ತೊಂದರೆ ಬೇಡ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಈ ವರದಿಯಿಂದಾಗಿ ಬಗರ್ ಹುಕುಂ ಅರ್ಜಿಗಳು ಹಾಗೂ ಅಕ್ರಮ ಸಕ್ರಮ ಅನುಷ್ಠಾನಕ್ಕೂ ತೊಂದರೆಯಾಗಿದೆ ಎಂದರು.

ಕೇಂದ್ರ ಸರ್ಕಾರದ ಬಳಿಗೆ ಸರ್ವ ಪಕ್ಷಗಳ ನಿಯೋಗ ಕರೆದೊಯ್ಯಬೇಕು. ಸಂವಿಧಾನದ 371ನೇ ವಿಧಿಯಡಿ ಸೇರಿಸಿ ವಿಶೇಷ ಸ್ಥಾನಮಾನ ನೀಡಬೇಕು ಎಂಬಂತಹ ಹಲವು ಸಲಹೆಗಳು ಬಂದಿವೆ ಎಂದು ಹೇಳಿದರು. ಕೇವಲ ಇದರ ಬಗ್ಗೆ ಸಂಪುಟಲ್ಲಿ ತೀರ್ಮಾನ ಮಾಡಬಾರದೆಂಬ ಉದ್ದೇಶದಿಂದ ರೈತರು, ಸಾರ್ವಜನಿಕರ ಅಭಿಪ್ರಾಯಗಳನ್ನು ಪಡೆದು ವಿಶೇಷ ಚರ್ಚೆಗೆ ಅವಕಾಶ ಮಾಡಿಕೊಡಲಾಗಿದೆ ಎಂದು ಹೇಳಿದರು. ಕಳೆದ ಅಧಿವೇಶನದಲ್ಲಿ ನಾನು ಬಾಯಿ ತೆಗೆಯಲು ಪ್ರತಿಪಕ್ಷಗಳು ಬಿಡಲಿಲ್ಲ. ಹೀಗಾಗಿ ಎರಡು ದಿನ ಅಧಿವೇಶನ ಮೊಟಕುಗೊಂಡಿತ್ತು. ಸೆ.27ರೊಳಗೆ ರಾಜ್ಯದ ಅಭಿಪ್ರಾಯವನ್ನು ಕೇಂದ್ರಕ್ಕೆ ತಿಳಿಸಬೇಕಿದೆ.

ರಾಜ್ಯದ ನಾಲ್ಕು ಭಾಗಗಳಲ್ಲಿ ಬರ ಪರಿಸ್ಥಿತಿ ಬಗ್ಗೆ ಚರ್ಚೆ ಮಾಡಲಾಗಿದೆ. ಈಗಾಗಲೇ 124 ತಾಲ್ಲೂಕುಗಳನ್ನು ಬರ ಪೀಡಿತ ಎಂದು ಘೋಷಣೆ ಮಾಡಲಾಗಿದೆ.

“ ಕಸ್ತೂರಿ ರಂಗನ್ ವರದಿ ತಿರಸ್ಕರಿಸಿ ಎಂಬ ಒತ್ತಾಯ ಬಂದಿವೆ. ನಮ ಆಸ್ತಿ ನಮ ಬದುಕಿಗೆ ತೊಂದರೆ ಬೇಡ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಈ ವರದಿಯಿಂದಾಗಿ ಬಗರ್ ಹುಕುಂ ಅರ್ಜಿಗಳು ಹಾಗೂ ಅಕ್ರಮ ಸಕ್ರಮ ಅನುಷ್ಠಾನಕ್ಕೂ ತೊಂದರೆಯಾಗಿದೆ ಎಂದರು.
ಕೇಂದ್ರ ಸರ್ಕಾರದ ಬಳಿಗೆ ಸರ್ವ ಪಕ್ಷಗಳ ನಿಯೋಗ ಕರೆದೊಯ್ಯಬೇಕು. ಸಂವಿಧಾನದ 371ನೇ ವಿಧಿಯಡಿ ಸೇರಿಸಿ ವಿಶೇಷ ಸ್ಥಾನಮಾನ ನೀಡಬೇಕು ಎಂಬಂತಹ ಹಲವು ಸಲಹೆಗಳು ಬಂದಿವೆ ಎಂದು ಹೇಳಿದರು. ಕೇವಲ ಇದರ ಬಗ್ಗೆ ಸಂಪುಟಲ್ಲಿ ತೀರ್ಮಾನ ಮಾಡಬಾರದೆಂಬ ಉದ್ದೇಶದಿಂದ ರೈತರು, ಸಾರ್ವಜನಿಕರ ಅಭಿಪ್ರಾಯಗಳನ್ನು ಪಡೆದು ವಿಶೇಷ ಚರ್ಚೆಗೆ ಅವಕಾಶ ಮಾಡಿಕೊಡಲಾಗಿದೆ ಎಂದು ಹೇಳಿದರು. ಕಳೆದ ಅಧಿವೇಶನದಲ್ಲಿ ನಾನು ಬಾಯಿ ತೆಗೆಯಲು ಪ್ರತಿಪಕ್ಷಗಳು ಬಿಡಲಿಲ್ಲ. ಹೀಗಾಗಿ ಎರಡು ದಿನ ಅಧಿವೇಶನ ಮೊಟಕುಗೊಂಡಿತ್ತು. ಸೆ.27ರೊಳಗೆ ರಾಜ್ಯದ ಅಭಿಪ್ರಾಯವನ್ನು ಕೇಂದ್ರಕ್ಕೆ ತಿಳಿಸಬೇಕಿದೆ.

ಪ್ರತಿಪಕ್ಷಗಳ ತೀವ್ರ ಒತ್ತಾಯದಿಂದಾಗಿ ನಿರಪರಾಧಿಯಾಗಿದ್ದ ಇವರ ರಾಜೀನಾಮೆಯನ್ನು ಅನಿವಾರ್ಯವಾಗಿ ಪಡೆಯಬೇಕಾಗಿತ್ತು. ಪಾದಯಾತ್ರೆ, ಪ್ರತಿಭಟನೆ ಮಾಡಲು ನಮ ತಕರಾರು ಇಲ್ಲ. ಕಸ್ತೂರಿ ರಂಗನ್ ವರದಿಯಿಂದ ಆಗುತ್ತಿರುವ ತೊಂದರೆಯನ್ನು ಕಣ್ಣಾರೆ ಕಂಡಿದ್ದೇನೆ. ಜನಾಭಿಪ್ರಾಯ ಪಡೆದಿದ್ದೇನೆ ಎಂದರು. ಅಧಿಕಾರಿಗಳಿಗಿಂತ ರೈತರೇ ಚೆನ್ನಾಗಿ ಅಧ್ಯಯನ ಮಾಡಿದ್ದಾರೆ.

## ಶ್ರೀ ಅಂಬಿಗರ ಚೌಡಯ್ಯ ಗಜಾನನ ಸಮಿತಿ ಅವರಿಂದ ಅನ್ನಸಂತರ್ಪಣೆ

ಅ.ಶ. ಸುದ್ದಿ ಕ.ನಕಗಿರಿ

ಕನಕಗಿರಿ: ಪಟ್ಟಣದ 14ನೇ ವಾರ್ಡಿನ ಸುಣಗಾರು ಓಣಿಯಲ್ಲಿ ಶ್ರೀ ಅಂಬಿಗರ ಚೌಡಯ್ಯ ಗಜಾನನ ಸಮಿತಿ ವತಿಯಿಂದ ಪ್ರತಿ ವರ್ಷದಂತೆ ಈ ವರ್ಷವೂ ಗಣೇಶ ಪ್ರತಿಷ್ಠಾಪನೆ ಹಾಗೂ ಅನ್ನಸಂತರ್ಪಣೆ ಕಾರ್ಯಕ್ರಮವನ್ನು ಇಂದು ಭಕ್ತಿಭಾವದಿಂದ ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸಿ ವಿಶೇಷ ಪೂಜೆ ಹಾಗೂ ಧಾರ್ಮಿಕ ವಿಧಿ-ವಿಧಾನಗಳನ್ನು ನೆರವೇರಿಸಲಾಯಿತು.



ಬಳಿಕ ಭಕ್ತರು ಹಾಗೂ ಸಾರ್ವಜನಿಕರಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡು ಪ್ರಸಾದ ಸ್ವೀಕರಿಸಿದರು. ಗಣೇಶೋತ್ಸವದ ಅಂಗವಾಗಿ ಸಮಿತಿ ಸದಸ್ಯರು ಹಾಗೂ ಯುವಕರು ಉತ್ಸಾಹದಿಂದ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿದರು. ಈ ಸಂದರ್ಭದಲ್ಲಿ ಸುಣಗಾರು ಓಣಿಯ ನಿವಾಸಿಗಳು ಸೇರಿದಂತೆ ಸಾರ್ವಜನಿಕರು ಉಪಸ್ಥಿತರಿದ್ದರು.

ಅಜಾತ ಶತ್ರು
ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

## ದಸರಾ ಕ್ರೀಡಾಕೂಟದ ಕೊಪ್ಪಳ ಜಿಲ್ಲಾ ಮಟ್ಟದ ಕರಾಟೆಯಲ್ಲಿ ಪ್ರಥಮ ಸ್ಥಾನ



ಅ.ಶ. ಸುದ್ದಿ ಕೊಪ್ಪಳ

ಕೊಪ್ಪಳ: 19-09-2026 ರಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಕೊಪ್ಪಳ,ನ್ಯಾಷನಲ್ ಸ್ಪಿರಿಟ್ ಕರಾಟೆ ಅಕಾಡೆಮಿ ಕೊಪ್ಪಳ, ಡಿಸ್ಟ್ರಿಕ್ಟ್ ಸ್ಪೋರ್ಟ್ಸ್ ಕರಾಟೆ ಅಕಾಡೆಮಿ ಇವರ ಸಹಯೋಗದಲ್ಲಿ ಕೊಪ್ಪಳ ಜಿಲ್ಲಾ ಮಟ್ಟದ ದಸರಾ ಕರಾಟೆ ಕ್ರೀಡಾಕೂಟ ನಡೆಯಿತು ಇದರಲ್ಲಿ ಭಾಗವಹಿಸಿದ ಚಾಂದ ಪಾಷಾ ಅವರು ಕರಾಟೆಯ ಕತಾ ವಿಭಾಗದಲ್ಲಿ ಪ್ರಥಮಸ್ಥಾನ ಪಡೆದುಕೊಂಡಿದ್ದಾರೆ.

ಈ ಸಂದರ್ಭದಲ್ಲಿ ದಸರಾ ಕ್ರೀಡಾಕೂಟ ನಡೆಸಿಕೊಟ್ಟ ರಾಜಬಕ್ಷಿ. ಊ. ಗಿ ಸರ್, ಭಾಷಾ ಸಾಹೇಬ್, ಶ್ರೀಕಾಂತ್ ಸರ್,ಮಹಾಂತೇಶ್ ಬೀಳಗಿ ಸರ್, ದೇವಪ್ಪ ಸರ್, ಮುಂತಾದವರು ಉಪಸ್ಥಿತರಿದ್ದು ಹರ್ಷ ವ್ಯಕ್ತಪಡಿಸಿದ್ದಾರೆ.

## ಬೀರಪ್ಪ ಅಂಡಗಿಗೆ ಶಿಕ್ಷಣ ಸೇವಾರತ್ನ ಪ್ರಶಸ್ತಿ ಪ್ರದಾನ



ಅ.ಶ. ಸುದ್ದಿ ಕೊಪ್ಪಳ

ಕೊಪ್ಪಳ: ವಿಕಲಚೇತನ ನೌಕರರ ಸಂಘದ ಹಾಗೂ ಎನ್.ಪಿ.ಎಸ್.ನವೆಂಬರ್ ಸಂಘದ ರಾಜ್ಯಾಧ್ಯಕ್ಷ ಹಾಗೂ ಸರಕಾರಿ ನೌಕರರ ಸಂಘದ ಕಾರ್ಯಾಧ್ಯಕ್ಷರಾದ ಬೀರಪ್ಪ ಅಂಡಗಿ ಚಿಲವಾಡಗಿ ಅವರಿಗೆ ಕರ್ನಾಟಕ ಪ್ರಸ್ ಕ್ಲಬ್ ವತಿಯಿಂದ ಸೆ.20 ರ ಭಾನುವಾರ ಸಂಜೆ ಬೆಂಗಳೂರು ನಗರದ ಟೌನ್ ಹಾಲ್ ನಲ್ಲಿ ಹಮ್ಮಿಕೊಂಡಿದ್ದ ಗುರು ನಮನ ಕಾರ್ಯಕ್ರಮದಲ್ಲಿ ರಾಜ್ಯ ಮಟ್ಟದ ಶಿಕ್ಷಣ ಸೇವಾರತ್ನ ಪ್ರಶಸ್ತಿ ನೀಡಿ ಗೌರವಿಸಿದರು.

ಬಹದ್ದೂರಬಂಡಿ ಶಾಲಾ ಮಕ್ಕಳನ್ನು ಸ್ವಂತ ಖರ್ಚಿನಲ್ಲಿ ವಿಮಾನಯಾನ ಮಾಡಿಸಿದ್ದು,ಜೊತೆಯಲ್ಲಿ ಶಾಲಾ ಕಟ್ಟದ ಸೇರಿದಂತೆ ಮುಂತಾದ ಶೈಕ್ಷಣಿಕ ಪ್ರಗತಿಯನ್ನು ಗಮಿಸಿ ಪ್ರಶಸ್ತಿ ನೀಡಿದ್ದಾರೆ. ಈ ಸಮಯದಲ್ಲಿ ನಿವೃತ್ತಿ ಲೋಕಾಯುಕ್ತರಾದ ಎನ್.ಸಂತೋಷ ಹೆಗಡೆ,ಕರ್ನಾಟಕ ಪ್ರಸ್ ಕ್ಲಬ್ ಅಧ್ಯಕ್ಷರಾದ ರಾಮಸ್ವಾಮಿ,ಕಾರ್ಯದರ್ಶಿ ರಮೇಶ,ಶ್ರೀಪಾದ ಸೇರಿದಂತೆ ಮುಂತಾದವರು ಹಾಜರಿದ್ದರು..

## ಶ್ರೀರಾಮ್ ಫೈನಾನ್ಸ್‌ನಿಂದ 2,500 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ

ಅ.ಶ. ಸುದ್ದಿ ಕೊಪ್ಪಳ




ಕೊಪ್ಪಳ: ವಾಹನ ಚಾಲಕರು, ಕ್ಲೀನರ್‌ಗಳು, ಹೆಲ್ಪರ್‌ಗಳು ಹಾಗೂ ಕಾರ್ಮಿಕರ ಮಕ್ಕಳು ಆರ್ಥಿಕ ಸಂಕಷ್ಟದಿಂದ ಶಿಕ್ಷಣದಿಂದ ವಂಚಿತರಾಗಬಾರದು ಎಂಬ ಉದ್ದೇಶದಿಂದ ಶ್ರೀರಾಮ್ ಫೈನಾನ್ಸ್ ವತಿಯಿಂದ 'ಶ್ರೀರಾಮ್ ಸೇವಾ ಸಂಕಲ್ಪ'ದಡಿ ವಿದ್ಯಾರ್ಥಿವೇತನ ನೀಡುತ್ತಿರುವುದು ಶ್ಲಾಘನೀಯ ಎಂದು ಗಣ್ಯರು ಹೇಳಿದರು.

ನಗರದ ಹೊಸಪೇಟೆ ರಸ್ತೆಯ ಡಿಸಿ ಕಚೇರಿ ಬಳಿಯ ಮಧುಶ್ರೀ ಗಾರ್ಡನ್‌ನಲ್ಲಿ ಶನಿವಾರ ಆಯೋಜಿಸಿದ್ದ ವಿದ್ಯಾರ್ಥಿ ಪ್ರೋತ್ಸಾಹ ಧನ ವಿತರಣಾ ಸಮಾರಂಭದಲ್ಲಿ ಕೊಪ್ಪಳ, ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳ 8ರಿಂದ 12ನೇ ತರಗತಿಯ ಸುಮಾರು 2,500 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ವಿತರಿಸಲಾಯಿತು. ಯೋಜನೆಯ ನಿಯಮಾನುಸಾರ 8ರಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗೆ ತಲಾ 4 ಸಾವಿರ ಹಾಗೂ 11 ಮತ್ತು 12ನೇ ತರಗತಿ (ಪಿಯುಸಿ) ವಿದ್ಯಾರ್ಥಿಗಳಿಗೆ ತಲಾ 4,500 ಪ್ರೋತ್ಸಾಹ ಧನ ನೀಡಲಾಯಿತು.

ಬಿಸರಳ್ಳಿಯ ಶ್ರೀ ಗವಿಸಿದ್ದೇಶ್ವರ ಶಾಖಾ ಮಠದ ಶ್ರೀ ಮ.ನಿ.ಪ್ರ. ಶಿವಶಾಂತವೀರ ಮಹಾಸ್ವಾಮಿಗಳು ಆಶೀರ್ವಚನ ನೀಡಿ, ಶಿಕ್ಷಣವು ವಿದ್ಯಾರ್ಥಿಗಳ ಬದುಕಿಗೆ ದಾರಿದೀಪವಾಗುವುದರ ಜತೆಗೆ ಸಂಸ್ಕಾರ ಮತ್ತು ಸಚ್ಚಾರಿತ್ರ್ಯವನ್ನು ರೂಪಿಸಬೇಕು. ದೊರೆತಿರುವ ಆರ್ಥಿಕ ನೆರವನ್ನು ಶೈಕ್ಷಣಿಕ ಪ್ರಗತಿಗೆ ಸದುಪಯೋಗಪಡಿಸಿಕೊಂಡು ಪರಿಶ್ರಮದಿಂದ ಉನ್ನತ ಸಾಧನೆ ಮಾಡಬೇಕು ಎಂದು ಹಾರೈಸಿದರು. ಶ್ರೀರಾಮ್ ಫೈನಾನ್ಸ್ ಲಿಮಿಟೆಡ್‌ನ ಎಕ್ಸಿಕ್ಯೂಟಿವ್ ಡೈರೆಕ್ಟರ್ ಶ್ರೀಧರ ಮಠ ಮಾತನಾಡಿ, ಸಂಸ್ಥೆಯು ಹಣಕಾಸು ವ್ಯವಹಾರಕ್ಕೆ ಮಾತ್ರ ಸೀಮಿತವಾಗದೆ ಸಂಸ್ಥಾಪಕ ಆರ್. ತ್ಯಾಗರಾಜನ್ ಅವರ ಸಮಾಜಮುಖಿ ಆಶಯದಂತೆ ಕಾರ್ಯನಿರ್ವಹಿಸುತ್ತಿದೆ. ಹಗಲಿರುಳು ಶ್ರಮಿಸುವ ವಾಹನ ಚಾಲಕರು, ಕ್ಲೀನರ್‌ಗಳು ಹಾಗೂ ಹೆಲ್ಪರ್‌ಗಳ ಮಕ್ಕಳ ಶಿಕ್ಷಣಕ್ಕೆ ಬೆಂಬಲ ನೀಡುವ ಉದ್ದೇಶದಿಂದ 8ನೇ ತರಗತಿಯಿಂದ ಪಿಯುಸಿವರೆಗೆ ನಿರಂತರವಾಗಿ ಪ್ರೋತ್ಸಾಹ ಧನ ನೀಡಲಾಗುತ್ತಿದೆ ಎಂದರು.

ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ.ಎಸ್. ದರಗದ ಮತ್ತು ಕೊಪ್ಪಳ ಲೋಕಸಭಾ ಕ್ಷೇತ್ರದ ಸಂಸದ ರಾಜಶೇಖರ ಹಿಟ್ನಾಳ ಅವರು ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು. ಸಮಾರಂಭದಲ್ಲಿ ಎಸ್ಪಿ ಸಾಹಿಲ್ ಬಾಗ್ಲಾ, ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, ಶಾಸಕ ಕೆ. ರಾಘವೇಂದ್ರ ಹಿಟ್ನಾಳ, ವಿಧಾನ ಪರಿಷತ್ ಸದಸ್ಯೆ ಹೇಮಲತಾ ನಾಯಕ, ಮಾಜಿ ಸಂಸದ ಸಂಗಣ್ಣ ಕರಡಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತೆ ಹುಚ್ಚಮ್ಮ ಬಸಪ್ಪ ಚೌದ್ರಿ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಪ್ರಕಾಶ ಬಿ. ಆನಂದಳ್ಳಿ, ಬಿಇಒ ಶೇಖರಪ್ಪ ಹೊರಪೇಟೆ, ಶ್ರೀರಾಮ್ ಫೈನಾನ್ಸ್ ಬಳ್ಳಾರಿ ಝೋನ್ ಬಿಸಿನೆಸ್ ಹೆಡ್ ಚನ್ನನಗೌಡ ಎಚ್. ಸೇರಿದಂತೆ ಸಂಸ್ಥೆಯ ಅಧಿಕಾರಿಗಳು, ಸಿಬ್ಬಂದಿ, ವಿದ್ಯಾರ್ಥಿಗಳು ಹಾಗೂ ಪೋಷಕರು ಉಪಸ್ಥಿತರಿದ್ದರು.

## ಮೈಸೂರು ದಸರಾ : ಇಂದಿನಿಂದ ಗೋಲ್ಡ್ ಕಾರ್ಡ್ ಬುಕ್ಕಿಂಗ್ ಆರಂಭ

ಅ.ಶ. ಸುದ್ದಿ ಮೈಸೂರು



ಮೈಸೂರು: ವಿಶ್ವವಿಖ್ಯಾತ ಮೈಸೂರು ದಸರಾದ ಪ್ರಮುಖ ಆಕರ್ಷಣೀಯವಾದ ಜಂಬೂ ಸವಾರಿ ಪಂಜಿನ ಕವಾಯತು ಮತ್ತು ಡ್ರೋನ್ ವೀಕ್ಷಣೆಗೆ ಟಿಕೆಟ್ ಹಾಗೂ ಗೋಲ್ಡ್ ಕಾರ್ಡ್ ಬುಕ್ಕಿಂಗ್ ಇಂದಿನಿಂದ ಪ್ರಾರಂಭವಾಗಿದೆ. ಈ ಕುರಿತು ದಸರಾ ವಿಶೇಷಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಕಚೇರಿ ಪ್ರಕಟಣೆ ಹೊರಡಿಸಿದೆ.

ಅ.21 ರಂದು ನಡೆಯಲಿರುವ ಜಂಬೂಸವಾರಿ ಸೇರಿದಂತೆ ಪ್ರಮುಖ ಕಾರ್ಯಕ್ರಮಗಳಿಗೆ ಪ್ರವಾಸಿಗರಿಗೆ ಅನುಕೂಲವಾಗುವಂತೆ ಆನ್ಲೈನ್ ಬುಕಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆ. ಆಸಕ್ತರು ಮೈಸೂರು ದಸರಾ ಅಧಿಕೃತ ವೆಬ್ಸೈಟ್ www.mysoredasara.gov.in ನಲ್ಲಿ ಇಂದು ಬೆಳಿಗ್ಗೆ 11.30 ರಿಂದ ಟಿಕೆಟ್ ಕಾಯ್ದಿರಿಸಬಹುದು. .ದರಗಳು ಕಳೆದ ವರ್ಷದಂತೆಯೇ ಇರಲಿದ್ದು, ಗೋಲ್ಡ್ ಕಾರ್ಡ್‌ನಲ್ಲಿ ಜಂಬೂಸವಾರಿ, ಪಂಜಿನ ಕವಾಯತು, ಅರಮನೆ, ಮೃಗಾಲಯ, ಚಾಮುಂಡಿಬೆಟ್ಟ ಮತ್ತು ಒಂದು ದಿನದ ಡ್ರೋನ್ ಶೋ ವೀಕ್ಷಣೆಗೆ ಅವಕಾಶವಿದೆ. ಒಂದು ಟಿಕೆಟ್/ ಗೋಲ್ಡ್ ಕಾರ್ಡ್‌ನಲ್ಲಿ ಒಬ್ಬರಿಗೆ ಮಾತ್ರ ಪ್ರವೇಶಕ್ಕೆ ಅವಕಾಶವಿದ್ದು, ಸಾರ್ವಜನಿಕರು ಮುಂಚಿತವಾಗಿ ಬುಕ್ ಮಾಡಿಕೊಳ್ಳುವಂತೆ ಜಿಲ್ಲಾಡಳಿತ ಮನವಿ ಮಾಡಿದೆ.

# ಗೋಶಾಲೆ ಆರಂಭಿಸುವಂತೆ ಆಗ್ರಹಿಸಿ ಜಾನುವಾರುಗಳೊಂದಿಗೆ ರೈತರ ಪ್ರತಿಭಟನೆ

ಅ.ಶ. ಸುದ್ದಿ ಕನಕಗಿರಿ

**ಕನಕಗಿರಿ: ತಾಲೂಕಿನಾದ್ಯಂತ ಗೋಶಾಲೆಗಳನ್ನು ಕೂಡಲೇ ಆರಂಭಿಸಬೇಕು ಎಂದು ಆಗ್ರಹಿಸಿ ರೈತರು ಜಾನುವಾರುಗಳೊಂದಿಗೆ ಸೋಮವಾರ ಪ್ರತಿಭಟನೆ ನಡೆಸಿದರು. ಪಟ್ಟಣದ ಹೇಮರೆಡ್ಡಿ ಮಲ್ಲಮ್ಮ ಸರ್ಕಲ್‌ನ ಸರ್ಕಾರಿ ಆಸ್ಪತ್ರೆ ಬಳಿಯಿಂದ ರೈತರು ಜಾನುವಾರುಗಳೊಂದಿಗೆ ಮೆರವಣಿಗೆ ಮೂಲಕ ಯಮನೂರಪ್ಪ ದರ್ಗಾ ಮಾರ್ಗವಾಗಿ ಮೇಲ್ಗಡೆ ಹಾದು ರಾಜಬೀದಿ ಮೂಲಕ ತಹಶೀಲ್ದಾರ್ ಕಚೇರಿಗೆ ಆಗಮಿಸಿದರು.**

ತಾಲೂಕಿನಲ್ಲಿ ಮಳೆ ಕೊರತೆ ಹಾಗೂ ಮೇವಿನ ಸಮಸ್ಯೆಯಿಂದ ಜಾನುವಾರುಗಳನ್ನು ಸಾಕುವುದು ರೈತರಿಗೆ ಕಷ್ಟಕರವಾಗುತ್ತಿದೆ. ಜಾನುವಾರುಗಳಿಗೆ ಸಮರ್ಪಕ ಮೇವು ಮತ್ತು ನೀರಿನ ವ್ಯವಸ್ಥೆ ಕಲ್ಪಿಸುವುದರ ಜೊತೆಗೆ ತಾಲೂಕಿನಲ್ಲಿ ಹಗಲಿನಲ್ಲಿ ಏಳು ತಾಸು ರಾತ್ರಿ ಸಮಯದಲ್ಲಿ ಕಾಡುಪ್ರಾಣಿಗಳ ಹಾವಳಿ ಜಾಸ್ತಿ ಇದ್ದು ಈ ಕೂಡಲೇ ಸಾಯಂಕಾಲ 6:00ಯಿಂದ ಬೆಳಗ್ಗೆ 6 ಗಂಟೆವರೆಗೂ ಟು ಫೇಸ್ ವಿದ್ಯುತ್ ಸರಬರಾಜು ಮಾಡಬೇಕು. ಕನಕಗಿರಿಯ ಸುತ್ತಮುತ್ತ ಇರುವ ಎಲ್ಲಾ ಕೆರೆಗಳನ್ನು ಮತ್ತು ಸಣ್ಣಪುಟ್ಟ ಕೆರೆಗಳನ್ನು ದುರಸ್ತಿ ಮಾಡಿಸಿ ತುಂಬಿಸುವ ಕೆಲಸ ಜಿಲ್ಲಾಡಳಿತ ಭವನ ಮಾಡಬೇಕು.




ರೈತರ ಸಂಪೂರ್ಣ ಸಾಲಮನ್ನಾ ಮಾಡಬೇಕು ಈ ಹಿಂದೆ ಇದ್ದ. ಜನವರಿ ಯಲ್ಲಿ ಕನಕಗಿರಿ ಬಂದ್ ಕರೆ ಕೊಟ್ಟ 11 ಹಕ್ಕುತಾಯಗಳನ್ನು ಈ ಕೂಡಲೇ ಜಾರಿ ಮಾಡಬೇಕು. ಇನ್ನಿತರ ವಿಷಯಗಳು. ಕೆರೆತುಂಬಿಸುವ ಯೋಜನೆಯಾದ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮತದಿಂದ ಈಗಾಗಲೇ ಕನಕಗಿರಿ ತಾಲೂಕಿನಲ್ಲಿ ಸುತ್ತಮುತ್ತ ಹಳ್ಳಿಯಲ್ಲಿರುವ ದೊಡ್ಡ ಕೆರೆಗಳಿಗೆ ಮಾತ್ರ ನೀರು ಒದಗಿಸುವ ಕೆಲಸ ನಡೆಯುತ್ತಿದೆ. ಡ್ಯಾಮಿನ ಒಳಗಡೆ ನೀರುಖಾಲಿ ಯಾಗುವದರೊಳಗೆ ಈ ಕೂಡಲೇ ಎಲ್ಲಾ ಕೆರೆಗಳನ್ನು ತೀವ್ರಗತಿಯಲ್ಲಿ ತುಂಬಿಸಬೇಕು ಅದರ ಜೊತೆಗೆ ಕನಕಗಿರಿಯಲ್ಲಿ ಇನ್ನು ಚಿಕ್ಕ ಚಿಕ್ಕ ಕೆರೆಗಳು ದುರಸ್ತಿಯಾಗಿವೆ.

(ಉದಾ:– ಓಣಿಮನಿ ಕೆರೆ, ಚಿನ್ನದಯ್ಯನ ಕೆರೆ) ಇನ್ನಿತರವು ಅವುಗಳನ್ನು ಸರಿಪಡಿಸಿ ಚಿಕ್ಕ ಚಿಕ್ಕ ಕೆರೆಗಳನ್ನು ತುಂಬಿಸುವದರ ಮುಖಾಂತರ ರೈತರ ನೆರವಿಗೆ ಹಾಗೂ ಪ್ರಾಣಿ ಪಕ್ಷಿಗಳ ನೆರವಿಗೆ ಧಾವಿಸಬೇಕು. ಇದನ್ನೇ ಜಿಲ್ಲೆಯಾದ್ಯಂತ ವಿಸ್ತ–ರಿಸಬೇಕು ಹಾಗೂ ಕೃಷ್ಣ ಬಿ ಸ್ಕೀಮ್ ತಾಂತ್ರಿಕ ಸಮಸ್ಯೆಯಿಂದ ಕೋರ್ಟ್ ಮೆಟ್ಟಿಲೇರಿರುವ ಕಾರಣ ಇದರ ವರದಿಯನ್ನು ತರಿಸಿಕೊಂಡು ಪರಿಸ್ಥಿತಿ



ಅವಲೋಕಿಸಿ ಕೊಪ್ಪಳ ಏತ ನೀರಾವರಿಯನ್ನು ಮಾನ್ಯ ಜಿಲ್ಲಾಧಿಕಾರಿಗಳು ಜಿಲ್ಲಾ ಆಡಳಿತ ಭವನದಿಂದ ಈ ಕೂಡಲೇ ಒಬ್ಬ ವಕೀಲರನ್ನು ನೇಮಕ ಮಾಡಿ ಕೃಷ್ಣ ಬಿ ಸ್ಕೀಮ್ ಯಾವ ಹಂತದಲ್ಲಿದೆ ಯಾಕೆ ತಡೆಹಿಡಿಯಲಾಗಿದೆ ಇದಕ್ಕೆ ಮೂಲ ಕಾರಣ ಏನು ಅದನ್ನು ಈ ಕೂಡಲೇ ಸರಿಪಡಿಸಿ.

ರೈತರ ಜಮೀನಿಗೆ ಡ್ರಿಪ್ ಇರಿಗೇಶನ್ ಮುಖಾಂತರ ನೀರು ಒದಗಿಸಬೇಕೆಂದು ಮಾನ್ಯ ಜಿಲ್ಲಾಧಿಕಾರಿಗಳ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಬೇಕು ಎಂದು ರೈತರು ತಿಳಿಸಿದರು. ಬೇಡಿಕೆಗಳನ್ನು ಅಧಿಕಾ–ರಿಗಳ ಗಮನಕ್ಕೆ ತಂದರು. ಸರ್ಕಾರ ಹಾಗೂ ಸಂಬಂಧಪಟ್ಟ ಅಧಿಕಾರಿಗಳು ರೈತರ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಶೀಘ್ರವಾಗಿ ಗೋಶಾಲೆಗಳನ್ನು ಆರಂಭಿಸಿ ಜಾನುವಾರುಗಳ ರಕ್ಷಣೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಈ ಸಂದರ್ಭದಲ್ಲಿ ಗಣೇಶರೆಡ್ಡಿ ಕನಕಗಿರಿ. ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾಧ್ಯಕ್ಷರು ಕೊಪ್ಪಳ. ಬಸವರಾಜ ದೇಸಾಯಿ ತಾಲೂಕ ಅಧ್ಯಕ್ಷರು. ಕನಕಗಿರಿ ಮ–ರಿಯಪ್ಪ ಸಾಲೋಣಿ ಕಾರಟಗಿ ರೈತ ಮುಖಂಡರು. ಶರಣೇಗೌಡ ಕೇಸರಟ್ಟಿ ರೈತ ಮುಖಂಡರು.

ಜಿಲ್ಲಾ ಪ್ರಧಾನ ಕಾರ್ಯ ಕಾರ್ಯದರ್ಶಿ ವೆಂಕಟೇಶ್ ಕುಲಕರ್ಣಿ ಹುಲಿ ಐದರ್. ಮ–ರಿಯಪ್ಪ ಹುಗ್ಗಿ ತಾಲೂಕು ಪ್ರಧಾನ ಕಾರ್ಯದರ್ಶಿ. , ಕನಕಪುರ ಅಧ್ಯಕ್ಷರು. ರಾಮಣ್ಣ ಜಾಡಿ ಅಧ್ಯಕ್ಷರು ಹುಲಿಹೈದರ್. ಬಸವರಾಜ್ ದೇಸಾಯಿ ತಾಲೂಕ ಅಧ್ಯಕ್ಷರು ಕನಕಗಿರಿ.ಲಾಲ್ ಸಾಬ್ ಜುಲಿಕೆರೆ ಕಾರ್ಯಧ್ಯಕ್ಷರು. ವೀರೇಶ್ ಬಿ ನಗರ ಘಟಕದ ಅಧ್ಯಕ್ಷರು. ಭೀಮೇಶ್ ಕುರುಬರ್ ಕೃಷ್ಣ ಕಾಖಿ ಶರಣಪ್ಪ ಕೋ ರೆಡ್ಡಿ ಶಿವಕುಮಾರ್ ಲಾಯದ ಹುಣಸಿ. ಖ.ಃ ಪಾಟೀಲ್ ವಕೀಲರು. ಅಮರೇಶ ಹುಲಿಹೈದರ್. ಗೋಸ್ಲೆಪ್ಪ ಗದ್ದಿ. ನಾಗೇಶ್ ಪೂಜಾರ್. ಪಾಮಣ್ಣ ಪೂಜಾರ್. ನಾಗಪ್ಪ ಕೊರೆಡ್ಡಿ. ಬಸರಿ ಹಾಳ ರೈತರು. ಗೌರಿಪುರ ರೈತರು. ಹುಲಿ ಐದರ್ ರೈತರು. ಕನಕಪುರ ರೈತರು. ಮುಸ್ಲಾಪುರ ರೈತರು. ನಾಗಲಾಪುರ ರೈತರು. ಚಿಕ್ಕ ಮಾದಿನಾಳ್ ರೈತರು. ಇನ್ನಿತರ ರೈತ ಮುಖಂಡರು ಹಾಜರಿದ್ದರು.

## ಕೇರಳದಲ್ಲಿ ಭಾರಿ ಮಳೆಗೆ ಪ್ರವಾಹ, ಭೂಕುಸಿತದಿಂದ 9 ಮಂದಿ ದುರ್ಮರಣ

ಅ.ಶ. ಸುದ್ದಿ ತಿರುವನಂತಪುರಂ

**ತಿರುವನಂತಪುರಂ: ಕೇರಳದಲ್ಲಿ ಕಳೆದ 24 ಗಂಟೆಗಳಿಂದ ಸು–ರಿಯುತ್ತಿರುವ ಭಾರಿ ಮಳೆಯಿಂದಾಗಿ ಪ್ರವಾಹ ಮತ್ತು ಭೂಕುಸಿತಗಳಿಗೆ ಒಂಬತ್ತು ಮಂದಿ ಬಲಿಯಾಗಿದ್ದು, ಹಲವರು ನಾಪತ್ತೆಯಾಗಿದ್ದಾರೆ. ಮಲಪ್ಪುರಂ ಜಿಲ್ಲೆಯಲ್ಲಿ ಐವರು ಹಾಗೂ ಕೊಟ್ಟಾಯಂ ಮತ್ತು ಇಡುಕ್ಕಿ ಜಿಲ್ಲೆಗಳಲ್ಲಿ ತಲಾ ಇಬ್ಬರು ಮೃತಪಟ್ಟಿದ್ದಾರೆ. ಹಠಾತ್ ಪ್ರವಾಹ ಮತ್ತು ಭೂಕುಸಿತದ ನಂತರ ಹಲವರು ನಾಪತ್ತೆಯಾಗಿರುವ ಮಲಪ್ಪುರಂನಲ್ಲಿ ರಕ್ಷಣಾ ಕಾರ್ಯಾಚರಣೆಯನ್ನು ತೀವ್ರಗೊಳಿಸಲಾಗಿದೆ.**



ಭಾರತೀಯ ಹವಾಮಾನ ಇಲಾಖೆ (IMD) ಇಂದು ಕೊಟ್ಟಾಯಂ, ಇಡುಕ್ಕಿ, ಎರ್ನಾಕುಲಂ, ತ್ರಿಶೂರ್, ಮಲಪ್ಪುರಂ ಮತ್ತು ಪಾಲಕ್ಕಾಡ್ ಜಿಲ್ಲೆಗಳಿಗೆ 'ಆರೆಂಜ್ ಅಲರ್ಟ್' ಘೋಷಿಸಿದೆ. ಜೊತೆಗೆ, ಗಂಟೆಗೆ 40 ಕಿಲೋಮೀಟರ್ ವೇಗದಲ್ಲಿ ಬಲವಾದ ಗಾಳಿ ಬೀಸುವ ಎಚ್ಚರಿಕೆಯನ್ನೂ ನೀಡಿದೆ. ಮಳೆ ತೀವ್ರಗೊಳ್ಳುತ್ತಿರುವುದರಿಂದ, ವಿಶೇಷವಾಗಿ ಗುಡ್ಡಗಾಡು ಪ್ರದೇಶಗಳಲ್ಲಿ ವಾಸಿಸುವ ಜನರು ಅತ್ಯಂತ ಎಚ್ಚರಿಕೆಯಿಂದ ಇರುವಂತೆ ಅಧಿಕಾರಿಗಳು ಮನವಿ ಮಾಡಿದ್ದಾರೆ. ಕೇರಳದ ಕಂದಾಯ ಸಚಿವ ಎ.ಪಿ. ಅನಿಲ್ ಕುಮಾರ್ ಮತ್ತು ಶಾಸಕ ಆರ್ಯದನ್ ಶೌಕತ್ ಸ್ಥಳದಲ್ಲಿ ಉಪಸ್ಥಿತರಿದ್ದು ರಕ್ಷಣಾ ಕಾರ್ಯಗಳನ್ನು ಮೇಲ್ವಿಚಾರಣೆ ನಡೆಸುತ್ತಿದ್ದಾರೆ. ಇಲ್ಲಿಯವರೆಗೆ ಒಟ್ಟು ಐದು ಮೃತದೇಹಗಳನ್ನು (ಇಂದು ಪತ್ತೆಯಾದ ಮೂರು ಸೇರಿದಂತೆ) ಹೊರತೆಗೆಯಲಾಗಿದ್ದು, ಒಬ್ಬ ಮಹಿಳೆ ಇನ್ನೂ ನಾಪತ್ತೆಯಾಗಿದ್ದಾರೆ ಎಂದು ಶಾಸಕ ಶೌಕತ್ ತಿಳಿಸಿದ್ದಾರೆ.

## 'ವಚನಾಮೃತ'

ಬಂಜೆ ಬಂಜೆ ಎಂದು ನಂಜಿರಿಸಿ
ಚುಚ್ಚೊ ಮೂಳರಿಗೆ ನಿತ್ಯ ಮೃಷ್ಟಾನ್ನವೇ
ಬಡಿಸಿ ಕಳಿಸಬೇಕಯ್ಯ ಬಾಡಿಗೆ
ಮನೆಯೊಳ್ ಬಂಧಿ ನಾವೆಲ್ಲ ಎಂಬ–
ರಿಯದ ಮಂದಿಯೊಳ್ ನನ್ನಗೇನಿದೆ
ಕಜ್ಜ ಸತ್ಯವಾಣಿ!!.



ವಾಣಿ ಭಂಡಾರಿ.

## ಕುರಿ ಕಾಯುತ್ತಿದ್ದ ಇಬ್ಬರ ಮೇಲೆ ಏಕಾಏಕಿ ಕರಡಿ ದಾಳಿ; ಪ್ರಾಣ ಅಪಾಯದಿಂದ ಪಾರು

ಅ.ಶ. ಸುದ್ದಿ ಕನಕಗಿರಿ

**ಕನಕಗಿರಿ: ತಾಲೂಕಿನ ಬಸವರಾಳ ಗ್ರಾಮದ ಸರ್ವೆ ನಂ. 76/4ರ ಗುತ್ತೂರಪ್ಪ ಗೊಲ್ಲರ್ ಅವರ ಹೊಲದಲ್ಲಿ ಕುರಿ ಕಾಯುತ್ತಿದ್ದ ಯಮನೂರಪ್ಪ31 ಹಾಗೂ ಹನುಮಂತಪ್ಪ36 ಅವರ ಮೇಲೆ ಕರಡಿ ದಾಳಿ ಮಾಡಿರುವ ಘಟನೆ ಸೋಮವಾರ ಮಧ್ಯಾಹ್ನ 1:00ಗೆ ನಡೆದಿದೆ.**

ಕುರಿಗಳನ್ನು ಮೇಯಿಸುತ್ತಿದ್ದ ಸಂದರ್ಭದಲ್ಲಿ ಏಕಾಏಕಿ ಕರಡಿ ಕಾಣಿಸಿಕೊಂಡು ಇಬ್ಬರ ಮೇಲೂ ದಾಳಿ ನಡೆಸಿದ್ದು. ಕರಡಿ ದಾಳಿಯಿಂದ ಇಬ್ಬರಿಗೂ ಗಾಯಗಳಾಗಿದ್ದು, ತಕ್ಷಣ ಅವರನ್ನು ಕನಕಗಿರಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದೊಯ್ಯಲಾಗಿದೆ ಎಂದು ತಿಳಿದುಬಂದಿದೆ. ಘಟನೆಯಿಂದ ಬಸವರಾಳ ಗ್ರಾಮಸ್ಥರು ಹಾಗೂ



ಕುರಿಗಾಹಿಗಳಲ್ಲಿ ಆತಂಕ ಹೆಚ್ಚಾಗಿದೆ. ಗ್ರಾಮ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕರಡಿ ಸಂಚಾರದ ಬಗ್ಗೆ ಅರಣ್ಯ ಇಲಾಖೆ ಅಧಿಕಾರಿಗಳು ಪರಿಶೀಲನೆ ನಡೆಸಿ, ಜನರು ಹಾಗೂ ಜಾನುವಾರುಗಳ ಸುರಕ್ಷತೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ. ಕರಡಿ ದಾಳಿ ನಡೆದ ಪ್ರದೇಶದಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ನಿಗಾ ವಹಿಸಿ, ಕರಡಿಯ ಚಲನವಲನ ಪತ್ತೆಹಚ್ಚಿ ಸೂಕ್ತ ಕ್ರಮ ಕೈಗೊಳ್ಳಬೇಕು



ಎಂಬುದು ಸ್ಥಳೀಯರ ಒತ್ತಾಯವಾಗಿದೆ.

(RFO) ಬಸವರಾಜ್ ಪೂಜಾರಿ, ಅರಣ್ಯ ವಲಯ ಅಧಿಕಾರಿ ಕರಡಿ ದಾಳಿಯಿಂದ ಗಾಯಗೊಂಡಿರುವ ಹನುಮೇಶಪ್ಪ ಹಾಗೂ ಯಮನೂರಪ್ಪ ಅವರಿಗೆ ಅಗತ್ಯ ವೈದ್ಯಕೀಯ ಚಿಕಿತ್ಸೆ ಕೊಡಿಸಲಾಗುವುದು. ಗಾಯಾಳುಗಳಿಗೆ ಸರ್ಕಾರದ ನಿಯಮಾನುಸಾರ ಪರಿಹಾರ ದೊರಕಿಸಲು ಕ್ರಮ ಕೈಗೊಳ್ಳಲಾಗುವುದು. ಎಂದು ತಿಳಿಸಿದರು.

# ಎಪಿಎಂಸಿ ರಸ್ತೆ ದುರಸ್ತಿ ಕಾಣದೆ ಹದಗೆಟ್ಟಿದ್ದು

## ಸಾರ್ವಜನಿಕರು ಅಪಾಯದ ನಡುವೆ ಸಂಚಾರ



ಅ.ಶ. ಸುದ್ದಿ ಕನಕಗಿರಿ

**ಕನಕಗಿರಿ: ಪಟ್ಟಣದ ಎಪಿಎಂಸಿ ಮುಖ್ಯ ರಸ್ತೆಯು ಹಲವು ದಿನಗಳಿಂದ ದುರಸ್ತಿ ಕಾಣದೆ ಹದಗೆಟ್ಟಿದ್ದು, ಸಾರ್ವಜನಿಕರು ಹಾಗೂ ವಾಹನ ಸವಾರರು ಅಪಾಯದ ನಡುವೆ ಸಂಚರಿಸುವಂತಾಗಿದೆ. ರಸ್ತೆಯಲ್ಲಿ ಗುಂಡಿಗಳು ಹಾಗೂ ಹದಗೆಟ್ಟಿರುವ ಭಾಗಗಳಿಂದಾಗಿ ರಾತ್ರಿ ಹೊತ್ತಾಗಿ ಕಾಣದೆ ದ್ವಿಚಕ್ರ**



**ವಾಹನ ಸವಾರರು, ಆಟೋಗಳು ಸೇರಿದಂತೆ ವಿವಿಧ ವಾಹನಗಳ ಸಂಚಾರಕ್ಕೆ ಗುಂಡಿ ಬಿದ್ದಿರುವುದರಿಂದ ಪ್ರಾಣಕ್ಕೆ ಅಪಾಯ ಆಗುವ ಸಾಧ್ಯತೆ ಹೆಚ್ಚಾಗಿದೆ.**

ವಿಶೇಷವಾಗಿ ರಾತ್ರಿ ಸಮಯದಲ್ಲಿ ಗುಂಡಿಗಳು ಸರಿಯಾಗಿ ಕಾಣದೆ ಅಪಘಾತ ಸಂಭವಿಸುವ ಆತಂಕ ಸಾರ್ವಜನಿಕರಲ್ಲಿ ಮೂಡಿದೆ. ಎಪಿಎಂಸಿ ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳಿಗೆ ಪ್ರತಿನಿತ್ಯ ಹೆಚ್ಚಿನ

> **"ಸಂಬಂಧಪಟ್ಟಂತಹ ಅಧಿಕಾರಿಗಳು ಇದನ್ನು ಕೂಡಲೇ ಗಮನವರಿಸಿ ಗುಂಡಿಯನ್ನು ಮುಚ್ಚುವ ವ್ಯವಸ್ಥೆ ಮಾಡಬೇಕಾಗಿರುತ್ತದೆ ಇಲ್ಲದಿದ್ದರೆ ಯಾ–ರಿಗಾದರೂ ಅಪಾಯ ತಪ್ಪಿದ್ದಲ್ಲ ಎಂದು ಪಟ್ಟಣ ಪಂಚಾಯತಿಯ ಸದಸ್ಯರು ಶೇಷಪ್ಪ ಪೂಜಾರಿ ತಿಳಿಸಿದರು.**

ಸಂಖ್ಯೆಯಲ್ಲಿ ರೈತರು, ವ್ಯಾಪಾರಿಗಳು ಹಾಗೂ ಸಾರ್ವಜನಿಕರು ಸಂಚರಿಸುತ್ತಾರೆ. ಹೀಗಾಗಿ ರಸ್ತೆ ಹದಗೆಟ್ಟಿರುವುದರಿಂದ ಜನರಿಗೆ ತೀವ್ರ ತೊಂದರೆಯಾಗುತ್ತಿದೆ. ಸಂಬಂಧಪಟ್ಟ ಅಧಿಕಾ–ರಿಗಳು ಸ್ಥಳ ಪರಿಶೀಲನೆ ನಡೆಸಿ, ರಸ್ತೆಯನ್ನು ಶೀಘ್ರ ದುರಸ್ತಿ ಮಾಡಿ ಸುಗಮ ಹಾಗೂ ಸುರಕ್ಷಿತ ಸಂಚಾರಕ್ಕೆ ಅನುವು ಮಾಡಿಕೊಡಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

# ಮರು ಪರಿಶೀಲನಾ ಕಾರ್ಯದಲ್ಲಿ ಅಧಿಕಾರಿಗಳು, ಸಮಿತಿ ಸದಸ್ಯರು ಜಂಟಿಯಾಗಿ ಮನೆ ಮನೆಗೆ ಭೇಟಿ ನೀಡಿ: ರೆಡ್ಡಿ ಶ್ರೀನಿವಾಸ್

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಗೃಹಲಕ್ಷ್ಮಿ ಯೋಜನೆಯ ಮರುಪರುಶೀಲನಾ ಕಾರ್ಯ ಆರಂಭವಾಗುತ್ತಿದ್ದು, ಈ ಕಾರ್ಯದಲ್ಲಿ ಅಧಿಕಾ–ರಿಗಳು ಸಂಬಂಧಿಸಿದ ತಾಲೂಕಿನ ಸಮಿತಿ ಸದಸ್ಯರೊಂದಿಗೆ ಜಂಟಿಯಾಗಿ ಮನೆಮನೆಗೆ ಭೇಟಿ ನೀಡಿ ಪರಿಶೀಲನೆ ಕಾರ್ಯ ಪೂರೈಸಬೇಕು ಎಂದು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ರೆಡ್ಡಿ ಶ್ರೀನಿವಾಸ್ ಅವರು ಹೇಳಿದರು. ಸೋಮವಾರದಂದು ಜಿಲ್ಲಾ ಪಂಚಾಯತಿಯ ಜೆ .ಎಚ್ ಪಟೇಲ್ ಸಭಾಂಗಣದಲ್ಲಿ ನಡೆದ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.**

ಗೃಹಲಕ್ಷ್ಮಿ ಯೋಜನೆಯ ಮರು ಪರಿಶೀಲನಾ ಕಾರ್ಯದ ಕುರಿತು ಈಗಾಗಲೇ ಅಂಗನವಾಡಿ ಕಾರ್ಯಕರ್ತೆಯರು, ಸಿಡಿಪಿಓ ಗಳು ಹಾಗೂ ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಸದಸ್ಯರಿಗೆ ತರಬೇತಿಯನ್ನು ನೀಡಲಾಗಿದೆ. ಅದರಂತೆ ಮರು ಪರಿಶೀಲನೆ ಕಾರ್ಯದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಮನೆಮನೆಗೆ ಭೇಟಿ ನೀಡಿ ಫಲಾನುಭವಿಗಳ ಮರು ಪರಿಶೀಲನೆ ನಡೆಸುವರು. ಈ ಕಾರ್ಯದಲ್ಲಿ ಸಂಬಂಧಿಸಿದ ತಾಲ್ಲೂಕಿನ ಸಮಿತಿ ಸದಸ್ಯರು ಜಂಟಿಯಾಗಿ ಪರಿಶೀಲನಾ ಕಾರ್ಯದಲ್ಲಿ ಪಾಲ್ಗೊಂಡು ಅರ್ಹ ಫಲಾನುಭವಿಗೆ ಯೋಜನೆಯ ಸೌಲಭ್ಯ ಒದಗಿಸಬೇಕು. ನಿಗದಿತ ನಮೂನೆಯಲ್ಲಿ ಅರ್ಹ ಫಲಾನುಭವಿಯ ವಿವರಗಳನ್ನು ಭರ್ತಿ ಮಾಡಿ, ಗುರು ಲಕ್ಷ್ಮಿ ಆಯಪ್ ನಲ್ಲಿ ಫಲಾನುಭವಿಯ ವಿವರಗಳನ್ನು ದಾಖಲಿಸಬೇಕು.

ವಿವರಗಳನ್ನು ದಾಖಲಿಸುವಾಗ ಎಚ್ಚ–ರಿಕೆ ವಹಿಸಬೇಕು. ಈ ಮರು ಪರಿಶೀಲನ ಕಾರ್ಯವು ಕಡ್ಡಾಯವಾಗಿ ಈಗಾಗಲೇ ಯೋಜನೆಯ ಫಲಾನುಭವಿಗಳು ಆಗಿರುವ ಮಹಿಳೆಯರಿಗೆ ಮಾತ್ರ. ಇದರಲ್ಲಿ ಯಾವುದೇ ಹೊಸ ಅರ್ಜಿಯನ್ನು ಸಲ್ಲಿಸಲು ಅವಕಾಶವಿಲ್ಲ. ಮರು ಪರಿಶೀಲನ ಕಾರ್ಯದ ನಂತರ ಹೊಸ ಅರ್ಜಿಗಳ ಸಲ್ಲಿಕೆಗೆ ಅವಕಾಶ ಕಲ್ಪಿಸಲಾಗುವುದು ಎಂದು ಅಧ್ಯಕ್ಷರು ಹೇಳಿದರು. ಮರುಪರಿಶೀಲನೆ ಸಂದರ್ಭದಲ್ಲಿ ಸದಸ್ಯರು ಹಾಗೂ ಅಧಿಕಾರಿಗಳು ತೆರಿಗೆ ಪಾವತಿಸುವ, ಜಿಎಸ್ಟಿ ಭರ್ತಿ ಮಾಡುವ ಮಹಿಳೆಯರನ್ನು (ಅಥವಾ ಮಹಿಳೆಯ ಪತಿ) ಹೊರತುಪಡಿಸಿ ಯೋಜನೆ ವ್ಯಾಪ್ತಿಯಲ್ಲಿ ಬರುವ ಎಲ್ಲ ಮಹಿಳೆಯರಿಗೆ ಸೂಕ್ತ ಮಾಹಿತಿಯನ್ನು ಹಾಗೂ ತಿಳುವಳಿಕೆಯನ್ನು ನೀಡಿ ವಿವರಗಳನ್ನು ಪಡೆಯಬೇಕು. ಯೋಜನೆಯನ್ನು ಬಿಟ್ಟುಕೊಡಲು ಆಸಕ್ತಿ ಹೊಂದಿರುವ ಮಹಿಳೆಯರು ಗೃಹಲಕ್ಷ್ಮಿ ಯೋಜನೆಯ ಆಯಪ್ ನಲ್ಲಿ ಸಂಬಂಧಿಸಿದ ಆಯ್ಕೆಯನ್ನು ಬಳಸುವಂತೆ ತಿಳುವಳಿಕೆ ನೀಡಬೇಕು.

ಈ ಆಯ್ಕೆಯನ್ನು ದಾಖಲಿಸುವಾಗ ಅಧಿಕಾರಿಗಳು ಬಹಳ ಎಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕು ಎಂದು ಅವರು ಹೇಳಿದರು. ಮರುಪರುಶೀಲನ ಕಾರ್ಯದಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಫಲಾನುಭವಿಗಳು ಕಡ್ಡಾಯವಾಗಿ ನಮ್ಮ ರಾಜ್ಯದವರಾಗಿರಬೇಕು ಹಾಗೂ ಅವರ ಬ್ಯಾಂಕ್ ಖಾತೆ ಕಡ್ಡಾಯವಾಗಿ ನಮ್ಮ ರಾಜ್ಯದಲ್ಲಿಯೇ ಇರಬೇಕು. ನಮ್ಮ ರಾಜ್ಯದ ಫಲಾನುಭವಿಯಾಗಿದ್ದು ಬೇರೆ ರಾಜ್ಯದಲ್ಲಿ ಬ್ಯಾಂಕ್ ಖಾತೆ ಹೊಂದಿದ್ದಲ್ಲಿ ಅಂತಹ ಫಲಾನುಭವಿಗೆ ಕಂತಿನ ಹಣ ಜಮೆ ಆಗುವುದಿಲ್ಲ. ಜಂಟಿ ಖಾತೆ ಹೊಂದಿರುವ ಹಾಗೂ ಸಾಲದ ಖಾತೆ ಹೊಂದಿರುವ ಫಲಾನುಭವಿಯ ಖಾತೆಗಳಿಗೆ ಯೋಜನೆಯ ಹಣ ಜಮೆ ಆಗುವುದಿಲ್ಲ. ಆದ್ದರಿಂದ ಇಂತಹ ಖಾತೆ ಹೊಂದಿರುವ ಮಹಿಳೆಯರಿಗೆ ಪ್ರತ್ಯೇಕ ಬ್ಯಾಂಕ್ ಅಥ–ವಾ ಅಂಚೆ ಕಚೇರಿಯಲ್ಲಿ ಖಾತೆ ತೆರೆಯುವಂತೆ ಸೂಕ್ತ ತಿಳುವಳಿಕೆ ನೀಡಬೇಕು ಎಂದು ಅವರು ತಿಳಿಸಿದರು. ಜಿಲ್ಲೆಯಲ್ಲಿ ಈಗಾಗಲೇ ಗೃಹಲಕ್ಷ್ಮಿ ಯೋಜನೆಯಲ್ಲಿ



ಜೂನ್ ವರೆಗೂ ಡಿಬಿಟಿ ಮೂಲಕ ಫಲಾನುಭವಿಗಳ ಖಾತೆಗೆ ಹಣ ಜಮೆ ಮಾಡಲಾಗಿದೆ.

ಜುಲೈ ತಿಂಗಳ ಹಣ ಈ ವಾರದಲ್ಲಿ ಜಮೆಯಾಗುತ್ತದೆ. ಆಗಸ್ಟ್ ಹಾಗೂ ಸೆಪ್ಟೆಂಬರ್ ಕಂತು ಗಳ ಡಿಬಿಟಿ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದು ಅವರು ಹೇಳಿದರು. ಸದ್ಯ ರಾಜ್ಯದಲ್ಲಿ ಅನ್ನ ಭಾಗ್ಯ ಯೋಜನೆಯ ಫಲಾನುಭವಿಗಳಿಗೆ ಇ– ಕೆ ವೈ ಸಿ ಮಾಡಿಸಲು ಅಕ್ಟೋಬರ್ 20ರವರೆಗೆ ಕಾಲವಕಾಶ ನೀಡಲಾಗಿದೆ. ನಮ್ಮ ಭಾಗದ ಬಹುತೇಕ ಜನ ದುಡಿಮೆ ಉದ್ದೇಶದಿಂದ ಬೆಂಗಳೂರು ಅಥವಾ ಬೇರೆ ರಾಜ್ಯಗಳಿಗೆ ಗುಳೇ ಹೋಗಿರುವುದರಿಂದ ಅವರು ತಮ್ಮ ಗ್ರಾಮಗಳಿಗೆ ಬಂದು ಖುದ್ದಾಗಿ ಈ ಕೆವೈಸಿ ಮಾಡಲು ಕಷ್ಟವಾಗುತ್ತದೆ. ಆದ–ದ್ದರಿಂದ ಆನ್ಲೈನ್ ಮೂಲಕ ಇ–ಕೆ ವೈ ಸಿ ಮಾಡಿಸಲು ಅವಕಾಶ ನೀಡುವಂತೆ ಮನವಿ ಮಾಡಿದ್ದಾರೆ. ಇದರೊಂದಿಗೆ ಸರ್ವಸಮಸ್ಯೆಯು ಹೆಚ್ಚಾಗಿರುವುದರಿಂದ ಇವೆರಡು ಸಮಸ್ಯೆಗಳನ್ನು ಪರಿಹರಿಸಿ ಸೂಕ್ತ ಪರಿಹಾರ ನೀಡುವಂತೆ ಸರ್ಕಾರಕ್ಕೆ ಪತ್ರ ಬರೆಯಲಾಗುವುದು.

ಅನ್ನಭಾಗ್ಯ ಯೋಜನೆಯಡಿ ಅಕ್ಟೋಬರ್ 20 ರೊಳಗೆ ಪಡಿತರ ಚೀಟಿಯಲ್ಲಿನ ಎಲ್ಲಾ ಸದಸ್ಯರ ಇಕೆವೈಸಿ ಮಾಡಿಸಬೇಕು. ಈ ಬಗ್ಗೆ ಆಹಾರ ಇಲಾಖೆಯ ತಾಲೂಕು ಅಧಿಕಾರಿಗಳು ಮತ್ತು ನ್ಯಾಯಬೆಲೆ ಅಂಗಡಿಗಳ ಮಾಲೀಕರು ಅಗತ್ಯ ಕ್ರಮ ವಹಿಸಬೇಕು. ಇಕೆವೈಸಿ ಕುರಿತಂತೆ ಸಾರ್ವಜನಿಕ–ರಿಗೆ ಅನಗತ್ಯವಾಗಿ ಸತಾಯಿಸುವ ಸಂಬಂಧಿಸಿದ ನ್ಯಾಯಬೆಲೆ ಅಂಗಡಿಗಳ ಮಾಲೀಕರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ತಿಳಿಸಿದರು. ರಾಜ್ಯಾದ್ಯಂತ ಗೃಹಲಕ್ಷ್ಮಿ ಫಲಾನುಭವಿಗಳ ಪರಿಷ್ಕರಣೆ ಕಾರ್ಯ ನಡೆಯುತ್ತಿದೆ. ಅದರಂತೆ ನಮ್ಮ ಜಿಲ್ಲೆಯಲ್ಲಿ 7,086 ಫಲಾನುಭವಿಗಳು ಮೃತಪಟ್ಟಿದ್ದು, ಅದರಲ್ಲಿ 2,664 ಫಲಾನುಭವಿಗಳ ಖಾತೆಗೆ ಮರಣ ಹೊಂದಿದ ನಂತರ 13,709 ಕಂತುಗಳಲ್ಲಿ ಒಟ್ಟು ರೂ.2,74,18,000/– ಮೊತ್ತವು ಮರಣ ಹೊಂದಿದ ನಂತರ ಜಮೆಯಾದ ಧನಸಹಾಯವಾಗಿರುತ್ತದೆ. ಇದರಲ್ಲಿ ರೂ.89,88,608/–ಗಳನ್ನು ಸರ್ಕಾರಕ್ಕೆ ಮರುಪಾವತಿಸಲಾಗಿದೆ. ಮರಣ ಹೊಂದಿದ ಫಲಾನುಭವಿಗಳ ಕುಟುಂಬದ ಸದಸ್ಯರು ಮೃತರ ಖಾತೆಯಿಂದ ಡ್ರಾ ಮಾಡಿಕೊಂಡಿರುವ ಮೊತ್ತ ರೂ.1,84,29,392/– ಆಗಿದ್ದು, ಸರ್ಕಾರಕ್ಕೆ ಮರುಪಾವತಿಸುವಂತೆ ಕುಟುಂಬ ಸದಸ್ಯರಿಗೆ ಸೂಕ್ತ ತಿಳುವಳಿಕೆ ನೀಡಿ, ಚಲನ್‌ಗಳನ್ನು ಸೃಜಿಸಿ ವಿತ–ರಿಸಲಾಗಿದೆ ಎಂದು ಅವರು ಅಧಿಕಾರಿಗಳಿಗೆ ತಿಳಿಸಿದರು.

ಶಕ್ತಿ ಯೋಜನೆಯಡಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಕೊಪ್ಪಳ ವಿಭಾಗದಲ್ಲಿ ಜೂನ್ 2023 ರಿಂದ ಆಗಸ್ಟ್ 2026 ರವರೆಗೆ 12,61,56,715 ವಯಸ್ಕರು ಹಾಗೂ 49,91,128 ಮಕ್ಕಳು ಸೇರಿದಂತೆ ಒಟ್ಟು 13,11,47,843 ಮಹಿಳಾ ಪ್ರಯಾಣಿಕರು ಪ್ರಯಾಣಿಸಿದ್ದು, ಇದಕ್ಕಾಗಿ ವಿಭಾಗದಿಂದ ರೂ.4,91,47,96,990/–ಗಳನ್ನು ವೆಚ್ಚ ಮಾಡಲಾಗಿದೆ ಎಂದು ಅಧ್ಯಕ್ಷರು ಹೇಳಿದರು. ಗೃಹಜ್ಯೋತಿ ಯೋಜನೆಯಡಿ ಫಲಾನುಭವಿಗಳ ಪರಿಷ್ಕರಣೆ ಕಾರ್ಯ ನಡೆಯುತ್ತಿದೆ. ಜೆಸ್ಕಾಂ ಕೊಪ್ಪಳ ವಿಭಾಗದಲ್ಲಿ 1,39,966 ಹಾಗೂ ಗಂಗಾವತಿ ವಿಭಾಗದಲ್ಲಿ 1,46,764 ಫಲಾನುಭವಿಗಳು ಸೇರಿದಂತೆ ಒಟ್ಟು 2,86,730 ಫಲಾನುಭವಿಗಳು ನೋಂದಣಿ ಮಾಡಿಕೊಂಡಿದ್ದಾರೆ.

ಶೇ.98.92 ರಷ್ಟು ಫಲಾನುಭವಿಗಳ ನೋಂದಣಿ ಪೂರ್ಣಗೊಂಡಿದ್ದು, ಆಗಸ್ಟ್ 2023 ರಿಂದ ಆಗಸ್ಟ್ 2026 ರವರೆಗೆ ಒಟ್ಟು ರೂ.455.3 ಕೋಟಿ ಗಳ ಸಬ್ಸಿಡಿಯನ್ನು ಬಿಡುಗಡೆ ಮಾಡಲಾಗಿದೆ. ಬಾಕಿ ಇರುವ ಫಲಾನುಭವಿಗಳ ಸರ್ವೇ ಕಾರ್ಯವನ್ನು ಶೀಘ್ರದಲ್ಲಿ ಪೂರ್ಣಗೊಳಿಸಿ ಎಂದು ಅವರು ಅಧಿಕಾರಿಗಳಿಗೆ ಸೂಚಿಸಿದರು. ಯುವನಿಧಿ ಯೋಜನೆಯಡಿ ಡಿಸೆಂಬರ್ 2023 ರಿಂದ ಸೆಪ್ಟೆಂಬರ್ 18, 2026 ರವರೆಗೆ 16,054 ಫಲಾನುಭವಿಗಳು ನೋಂದಣಿ ಮಾಡಿಕೊಂಡಿದ್ದು, ಒಟ್ಟು ರೂ.45,49,90,500/– ಗಳ ಮೊತ್ತವನ್ನು ಫಲಾನುಭವಿಗಳ ಖಾತೆಗೆ ಡಿಬಿಟಿ ಮೂಲಕ ನೇರವಾಗಿ ಜಮೆ ಮಾಡಲಾಗಿದೆ ಎಂದು ಅಧಿಕಾರಿಗಳಿಗೆ ಸೂಚಿಸಿದರು. ಸೆಪ್ಟೆಂಬರ್ 2026 ರವರೆಗೆ ಅನ್ನಭಾಗ್ಯ ಯೋಜನೆಯಡಿ ಜಿಲ್ಲೆಯ ಅನ್ನಭಾಗ್ಯ ಅಂತ್ಯೋದಯ ಮತ್ತು ಆದ್ಯತಾ ಪಡಿತರ ಚೀಟಿದಾರರಿಗೆ ನಿಯಮಾನುಸಾರ ಪಡಿತರ ವಿತರಣೆಗೆ ಕ್ರಮ ವಹಿಸಿ. ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ವರ್ಣಿತ್ ನೇಗಿ ಮಾತನಾಡಿ, ಸದ್ಯದಲ್ಲಿಯೇ ಗೃಹ ಲಕ್ಷ್ಮಿ ಆ ಆಪ್ ಅನ್ನು ಜಾರಿಗೊಳಿಸಲಾಗುವುದು.

ಫಲಾನುಭವಿಗಳು ಇದರ ಮೂಲಕ ಮರುಪರಿಶೀಲನ ಕಾರ್ಯದಲ್ಲಿ ಪಾಲ್ಗೊಳ್ಳಬಹುದು. ಈಗಾಗಲೇ ಇ–ಕೆ ವೈಸಿಗಾಗಿ ಇರುವ ಸರ್ವ ಸಮಸ್ಯೆಯನ್ನು ಬಗೆಹರಿಸಲು ಸಂಬಂಧಿಸಿದ ತಾಂತ್ರಿಕ ತಂಡಕ್ಕೆ ನಿರ್ದೇಶನ ನೀಡಲಾಗಿದೆ ಎಂದು ತಿಳಿಸಿದರು. ಸಭೆಯಲ್ಲಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಉಪಾಧ್ಯಕ್ಷರಾದ ಎಸ್ .ಬಿ ಖಾದ್ರಿ, ಮಂಜುನಾಥ್ ಗೊಂಡಬಾಳ, ಅಮರೇಶಪ್ಪ ಶರಣಪ್ಪ ಗಾಂಜಿ, ನಾಗರಾಜ್ ಅರಳಿ, ಸದಸ್ಯರಾದ ಬಾಲಚಂದ್ರ ಎಸ್, ಸೋಮನಾಥ ದೊಡ್ಡಮನಿ, ಫಾರೂಕ್ ದಲಾಯತ್, ಶಕುಂತಲಾ ಬಿಎಂ, ಹಜರತ್ ಹುಸೇನ್, ಆನಂದ್ ಹಾಸಲಕರ್, ದೇವಪ್ಪ ಬಾವಿಕಟ್ಟಿ, ವೆಂಕಟೇಶ್ ಬಾಬು ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಲೇಖಕರ ದಿನಚರಿ

## ನಮ್ಮ ಸುತ್ತಲಿನವರು? ನಮ್ಮ ಬದುಕಿನ ದಿಕ್ಸೂಚಿಗಳು!





**ಮನುಷ್ಯ ಒಬ್ಬಂಟಿಯಾಗಿ ಬದುಕಲು ಸಾಧ್ಯವಿಲ್ಲ. ಹುಟ್ಟಿನಿಂದಲೇ ಸಂಬಂಧಗಳ ನಡುವೆ ಬೆಳೆಯುವ ನಾವು, ಬದುಕಿನ ಪ್ರತಿಯೊಂದು ಹಂತದಲ್ಲೂ ಯಾರಾದರೊಬ್ಬರ ಪ್ರಭಾವಕ್ಕೆ ಒಳಗಾಗುತ್ತೇವೆ. ಹಾಗಾಗಿಯೇ ನಮ್ಮನ್ನೆಲ್ಲಾ ಸಂಘ ಜೀವಿಗಳೇನ್ನುವರು. ಕೆಲವರು ನಮ್ಮ ಕೈಹಿಡಿದು ಮುನ್ನಡೆಸುತ್ತಾರೆ; ಕೆಲವರು ನಮ್ಮ ತಪ್ಪುಗಳನ್ನು ತೋರಿಸಿ ತಿದ್ದುತ್ತಾರೆ; ಇನ್ನು ಕೆಲವರು ನಮ್ಮ ಬದುಕಿಗೆ ಬಂದು, ನಾವು ಯಾರು ಎಂಬುದನ್ನೇ ಬದಲಾಯಿಸಿ ಹೋಗುತ್ತಾರೆ.**

ಹಾಗಾದರೆ ನಮ್ಮ ಬದುಕನ್ನು ರೂಪಿಸುವುದು ನಮ್ಮ ನಿರ್ಧಾರಗಳಷ್ಟೇನಾ? ಅಥವಾ ನಮ್ಮ ಸುತ್ತಲಿನ ವ್ಯಕ್ತಿಗಳೂ ಅದರಲ್ಲಿ ಮಹತ್ತರ ಪಾತ್ರ ವಹಿಸುತ್ತಾರೆಯೇ? ಖಂಡಿತವಾಗಿಯೂ ಅವರ ಪಾತ್ರವಿದೆ. ಒಂದು ಪುಟ್ಟ ಮಗು ಹೇಗೆ ಮಾತನಾಡಬೇಕು, ಹೇಗೆ ವರ್ತಿಸಬೇಕು, ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು ಎಂಬುದನ್ನು ಮೊದಲು ತನ್ನ ಸುತ್ತಲಿನವರಿಂದಲೇ ಕಲಿಯುತ್ತದೆ. ಮನೆಯ ವಾತಾವರಣ, ತಂದೆ-ತಾಯಿಯ ನಡೆ, ಶಿಕ್ಷಕರ ಮಾತು, ಸ್ನೇಹಿತರ ಒಡನಾಟ?ಇವೆಲ್ಲವೂ ಅದರ ವ್ಯಕ್ತಿತ್ವದ ಮೇಲೆ ನಿಧಾನವಾಗಿ ಗುರುತು ಮೂಡಿಸುತ್ತವೆ.

ಒಂದು ಬೀಜ ಯಾವ ಮಣ್ಣಿನಲ್ಲಿ ಬಿತ್ತಲ್ಪಡುತ್ತದೆ, ಅದಕ್ಕೆ ಎಷ್ಟು ನೀರು ಮತ್ತು ಬೆಳಕು ಸಿಗುತ್ತದೆ ಎಂಬುದರ ಮೇಲೆ ಅದರ ಬೆಳವಣಿಗೆ ಅವಲಂಬಿತವಾಗಿರುವಂತೆ, ಮನುಷ್ಯನ ವ್ಯಕ್ತಿತ್ವವೂ ಅವನ ಸುತ್ತಲಿನ ವಾತಾವರಣದಿಂದ ಪ್ರಭಾವಿತವಾಗುತ್ತದೆ. ಕೆಲವೊಮ್ಮೆ ಒಬ್ಬ ವ್ಯಕ್ತಿ ನಮ್ಮ ಬಗ್ಗೆ ಹೇಳುವ ಒಂದು ಒಳ್ಳೆಯ ಮಾತು ನಮ್ಮೊಳಗೆ ವರ್ಷಗಳ ಕಾಲ ಉಳಿಯುತ್ತದೆ. "ನಿನ್ನಿಂದ ಸಾಧ್ಯ." "ನೀನು ಖಂಡಿತ ಗೆಲ್ಲುತ್ತೀಯ." "ನಿನ್ನಲ್ಲಿ ಒಳ್ಳೆಯ ಪ್ರತಿಭೆಯಿದೆ, ಅದನ್ನು ಬೆಳೆಸು." ಎಂಬ ಮಾತುಗಳು ಸಾಮಾನ್ಯವಾಗಿ ಕೇಳಿಸಬಹುದು. ಆದರೆ ಅಂತಹ ಮಾತುಗಳನ್ನು ನಂಬಿಕೆಯ ಅಗತ್ಯವಿರುವ ಸಮಯದಲ್ಲಿ ಕೇಳಿದ ವ್ಯಕ್ತಿಗೆ ಅವು ಬದುಕಿನ ತಿರುವಾಗಬಹುದು.

ಅದೇ ರೀತಿ, "ನಿನ್ನಿಂದ ಏನೂ ಆಗುವುದಿಲ್ಲ." "ನೀನು ಯಾವಾಗಲೂ ಹೀಗೆಯೇ." "ನಿನ್ನಿಂದ ಇದನ್ನು ಮಾಡಲು ಸಾಧ್ಯವೇ ಇಲ್ಲ." ಎಂಬ ಮಾತುಗಳೂ ಮನಸ್ಸಿನ ಮೇಲೆ ಆಳವಾದ ಪರಿಣಾಮ ಬೀರುತ್ತವೆ. ಆದ್ದರಿಂದ ನಮ್ಮ ಮಾತುಗಳು ಕೇವಲ ಗಾಳಿಯಲ್ಲಿ ಕರಗಿಹೋಗುವ ಶಬ್ದಗಳಲ್ಲ. ಅವು ಮತ್ತೊಬ್ಬರ ಮನಸ್ಸಿನಲ್ಲಿ ಬೀಜಗಳಾಗಬಹುದು. ಅವುಗಳಲ್ಲಿ ಕೆಲವು ಆತ್ಮವಿಶ್ವಾಸದ ಮರವಾಗಿ ಬೆಳೆಯಬಹುದು; ಕೆಲವು ನಿರಾಶೆಯ ಮುಳ್ಳುಗಿಡವಾಗಬಹುದು. ಜೀವನದಲ್ಲಿ ಸ್ನೇಹಕ್ಕೆ ವಿಶೇಷ ಸ್ಥಾನವಿದೆ. ಒಳ್ಳೆಯ ಸ್ನೇಹಿತ ನಮ್ಮನ್ನು ತಪ್ಪು ದಾರಿಯಿಂದ ಹಿಂದಕ್ಕೆ ಕರೆತರುತ್ತಾನೆ. ನಾವು ಸೋತಾಗ ಧೈರ್ಯ ತುಂಬುತ್ತಾನೆ. ನಾವು ಗೆದ್ದಾಗ ಅತಿಯಾಗಿ ಹಾರಾಡದಂತೆ ಎಚ್ಚರಿಸುತ್ತಾನೆ. ಆದರೆ ಕೆಟ್ಟ ಸಂಗದ ಪರಿಣಾಮವೂ ಅಷ್ಟೇ ಗಂಭೀರ.

ತಪ್ಪು ಅಭ್ಯಾಸಗಳನ್ನು ಸಾಮಾನ್ಯವೆಂದು ತೋರಿಸುವ ಸ್ನೇಹ, ಸಮಯವನ್ನು ವ್ಯರ್ಥ ಮಾಡುವ ಅಭ್ಯಾಸ, ಕೆಟ್ಟ ನಿರ್ಧಾರಗಳಿಗೆ ಪ್ರೋತ್ಸಾಹ?ಇವೆಲ್ಲವೂ ನಿಧಾನವಾಗಿ ವ್ಯಕ್ತಿಯ ಬದುಕಿನ ದಿಕ್ಕನ್ನೇ ಬದಲಿಸಬಹುದು. ಆದ್ದರಿಂದ ಯಾರ ಜೊತೆ ನಾವು ಹೆಚ್ಚು ಸಮಯ ಕಳೆಯುತ್ತೇವೆ ಎಂಬುದು ಕೂಡ ನಮ್ಮ ಬದುಕಿನ ಒಂದು ನಿರ್ಧಾರವೇ. ಎಲ್ಲರೂ ನಮ್ಮವರು ಅಲ್ಲ! ಎಂಬುದನ್ನು ಮೊದಲು ತಿಳಿದುಕೊಳ್ಳಬೇಕು ನಮ್ಮ ಬದುಕಿನಲ್ಲಿ ಭೇಟಿಯಾಗುವ ಪ್ರತಿಯೊಬ್ಬರೂ ನಮ್ಮ ಹಿತೈಷಿಗಳಾಗಿರಬೇಕೆಂದಿಲ್ಲ. ಕೆಲವರು ನಮ್ಮ ಯಶಸ್ಸನ್ನು ನೋಡಿ ಸಂತೋಷಪಡುತ್ತಾರೆ. ಕೆಲವರು ನಮ್ಮನ್ನು ಪ್ರೋತ್ಸಾಹಿಸುತ್ತಾರೆ.

ಇನ್ನು ಕೆಲವರು ನಮ್ಮನ್ನು ಕೆಳಕ್ಕೆ ಎಳೆಯಲು ಪ್ರಯತ್ನಿಸುತ್ತಾರೆ. ಅದಕ್ಕಾಗಿ ಯಾರ ಮಾತನ್ನೂ ಕಣ್ಣುಮುಚ್ಚಿ ನಂಬಬಾರದು.ಒಬ್ಬರು ಸಲಹೆ ನೀಡಿದರು ಎಂದ ಮಾತ್ರಕ್ಕೆ ಅದನ್ನು ಅನುಸರಿಸಬೇಕಿಲ್ಲ. ಅವರ ಮಾತನ್ನು ಕೇಳಿ, ಯೋಚಿಸಿ, ನಮ್ಮ ಬದುಕಿಗೆ ಅದು ಸರಿಹೊಂದುತ್ತದೆಯೇ ಎಂದು ನಿರ್ಧರಿಸುವ ವಿವೇಕ ನಮ್ಮಲ್ಲಿರಬೇಕು. ಒಳ್ಳೆಯವರ ಸಂಗವನ್ನು ಸ್ವೀಕರಿಸುವಷ್ಟು, ನಮ್ಮನ್ನು ನೋಯಿಸುವ ಸಂಗದಿಂದ ದೂರ ಉಳಿಯುವ ಧೈರ್ಯವೂ ಬೇಕು ನಮ್ಮ ಬದುಕನ್ನು ರೂಪಿಸುವವರಲ್ಲಿ ಶಿಕ್ಷಕರ ಪಾತ್ರವನ್ನು ಮರೆಯಲು ಸಾಧ್ಯವೇ ಇಲ್ಲ. ಒಬ್ಬ ಶಿಕ್ಷಕ ಕಲಿಸಿದ ಒಂದು ಪಾಠ ಪರೀಕ್ಷೆಯಲ್ಲಿ ಮಾತ್ರವಲ್ಲ, ಬದುಕಿನಲ್ಲಿಯೂ ಉಪಯೋಗವಾಗಬಹುದು.

ಕೆಲವೊಮ್ಮೆ ಶಿಕ್ಷಕರ ಒಂದು ಮಾತು ವಿದ್ಯಾರ್ಥಿಯೊಳಗೆ ಮಲಗಿರುವ ಪ್ರತಿಭೆಯನ್ನು ಎಬ್ಬಿಸುತ್ತದೆ. "ನೀನು ಇದನ್ನು ಮಾಡಬಲ್ಲೆ" ಎಂಬ ಶಿಕ್ಷಕರ ನಂಬಿಕೆ, ವಿದ್ಯಾರ್ಥಿಯ ಆತ್ಮವಿಶ್ವಾಸಕ್ಕೆ ಮೊದಲ ಮೆಟ್ಟಿಲಾಗಬಹುದು. ಅದಕ್ಕಾಗಿಯೇ ಒಬ್ಬ ಉತ್ತಮ ಶಿಕ್ಷಕ ಕೇವಲ ಪಾಠ ಕಲಿಸುವವನಲ್ಲ; ಅವನು ಬದುಕಿಗೆ ದಿಕ್ಕು ತೋರಿಸುವ ದಿಕ್ಸೂಚಿ. ಕೆಲವರು ಬಂದು ಹೋಗುತ್ತಾರೆ? ಆದರೆ ಗುರುತು ಉಳಿಸುತ್ತಾರೆ.ನಮ್ಮ ಬದುಕಿನಲ್ಲಿ ಭೇಟಿಯಾಗುವ ಎಲ್ಲರೂ ಶಾಶ್ವತವಾಗಿ ನಮ್ಮೊಂದಿಗೆ ಇರುವುದಿಲ್ಲ. ಕೆಲವರು ಕೆಲವು ದಿನಗಳು, ಕೆಲವರು ಕೆಲವು ವರ್ಷಗಳು, ಇನ್ನು ಕೆಲವರು ಜೀವನಪೂರ್ತಿ ನಮ್ಮೊಂದಿಗೆ ಇರುತ್ತಾರೆ. ಆದರೆ ಅವರಲ್ಲಿ ಕೆಲವರು ನಮ್ಮ ಬದುಕಿನಲ್ಲಿ ಅಚ್ಚಳಿಯದ ಗುರುತು ಮೂಡಿಸುತ್ತಾರೆ. ಯಾರಾದರೂ ನಮಗೆ ನೋವು ಕೊಟ್ಟಿರಬಹುದು. ಆ ನೋವು ನಮಗೆ ಒಂದು ಪಾಠ ಕಲಿಸಿರಬಹುದು. ಯಾರಾದರೂ ನಮ್ಮ ಕೈಬಿಟ್ಟಿರಬಹುದು. ಅದರಿಂದ ನಾವು ನಮ್ಮ ಕಾಲಿನ ಮೇಲೆ ನಿಲ್ಲುವುದನ್ನು ಕಲಿತಿರಬಹುದು. ಯಾರಾದರೂ ನಮ್ಮನ್ನು ನಂಬಿರಬಹುದು. ಆ ನಂಬಿಕೆ ನಮ್ಮ ಸಾಮರ್ಥ್ಯವನ್ನು ನಮಗೇ ಪರಿಚಯಿಸಿರಬಹುದು.

ಹೀಗಾಗಿ ನಮ್ಮ ಬದುಕನ್ನು ರೂಪಿಸುವವರು ಕೇವಲ ನಮ್ಮನ್ನು ಪ್ರೀತಿಸಿದವರಲ್ಲ; ನಮ್ಮನ್ನು ಬದಲಾಯಿಸಿದ ಪ್ರತಿಯೊಬ್ಬರೂ ಯಾವುದೋ ರೀತಿಯಲ್ಲಿ ನಮ್ಮ ಬದುಕಿನ ಗುರುಗಳೇ. ಆದರೆ ಅಂತಿಮ ನಿರ್ಧಾರ ನಮ್ಮದೇ ನಮ್ಮ ಸುತ್ತಲಿನವರು ನಮ್ಮ ಮೇಲೆ ಪ್ರಭಾವ ಬೀರುತ್ತಾರೆ ಎಂಬುದು ಸತ್ಯ. ಆದರೆ ನಮ್ಮ ಬದುಕಿನ ಸಂಪೂರ್ಣ ಹೊಣೆ ಅವರದ್ದಲ್ಲ. ಯಾರೋ ತಪ್ಪು ದಾರಿ ತೋರಿಸಿದರು ಎಂದು ನಾವು ತಪ್ಪು ದಾರಿಯಲ್ಲಿ ಹೋಗಲೇಬೇಕೆಂದಿಲ್ಲ. ಯಾರೋ ನಮ್ಮನ್ನು ನಿರುತ್ಸಾಹಗೊಳಿಸಿದರು ಎಂದು ನಾವು ನಮ್ಮ ಕನಸುಗಳನ್ನು ಕೈಬಿಡಬೇಕೆಂದಿಲ್ಲ. ಯಾರೋ ನಮ್ಮನ್ನು ನಂಬಲಿಲ್ಲ ಎಂದು ನಾವು ನಮ್ಮನ್ನು ನಂಬಬಾರದೆಂದಿಲ್ಲ.

ನಮ್ಮ ಸುತ್ತಲಿನವರು ದಿಕ್ಕು ತೋರಿಸಬಹುದು; ಆದರೆ ಯಾವ ದಾರಿಯಲ್ಲಿ ನಡೆಯಬೇಕು ಎಂಬ ನಿರ್ಧಾರ ನಮ್ಮದೇ. ಆದ್ದರಿಂದ ನಮ್ಮ ಬದುಕಿನಲ್ಲಿ ಒಳ್ಳೆಯವರನ್ನು ಗುರುತಿಸೋಣ. ನಮ್ಮನ್ನು ಬೆಳೆಸುವವರನ್ನು ಹತ್ತಿರ ಇಟ್ಟುಕೊಳ್ಳೋಣ. ನಮ್ಮನ್ನು ಕುಗ್ಗಿಸುವ ಸಂಬಂಧಗಳಲ್ಲಿ ಅಗತ್ಯವಾದ ಗಡಿ ಇಟ್ಟುಕೊಳ್ಳೋಣ. ಅದರ ಜೊತೆಗೆ ನಾವೂ ಮತ್ತೊಬ್ಬರ ಬದುಕಿಗೆ ಒಳ್ಳೆಯ ಪ್ರಭಾವವಾಗೋಣ. ನಮ್ಮ ಒಂದು ಮಾತು ಯಾರಿಗಾದರೂ ಧೈರ್ಯವಾಗಲಿ. ನಮ್ಮ ಒಂದು ನಗು ಯಾರಿಗಾದರೂ ನೆಮ್ಮದಿಯಾಗಲಿ. ನಮ್ಮ ಒಂದು ಸಲಹೆ ಯಾರಿಗಾದರೂ ದಾರಿಯಾಗಲಿ. ನಮ್ಮ ಒಂದು ಸಹಾಯ ಯಾರಿಗಾದರೂ ಹೊಸ ಆರಂಭವಾಗಲಿ. ಕೊನೆಗೆ, ನಮ್ಮ ಸುತ್ತಲಿನವರು ನಮ್ಮ ಬದುಕನ್ನು ರೂಪಿಸುವಲ್ಲಿ ಪಾತ್ರವಹಿಸುತ್ತಾರೆ; ಹಾಗೆಯೇ ನಾವು ಕೂಡ ಯಾರದೋ ಬದುಕನ್ನು ರೂಪಿಸುವ ವ್ಯಕ್ತಿಯಾಗಿರುತ್ತೇವೆ. ಹೀಗಾಗಿ ನಮ್ಮ ಬದುಕಿಗೆ ಒಳ್ಳೆಯವರನ್ನು ಹುಡುಕುವುದಕ್ಕಿಂತ ಮೊದಲು, ನಾವು ಮತ್ತೊಬ್ಬರ ಬದುಕಿನಲ್ಲಿ ಒಳ್ಳೆಯ ವ್ಯಕ್ತಿಯಾಗಿದ್ದೇವೆಯೇ ಎಂಬುದನ್ನು ಒಮ್ಮೆ ನಮ್ಮೊಳಗೆ ಕೇಳಿಕೊಳ್ಳೋಣ. ಬಹುಶಃ ಅಲ್ಲಿಂದಲೇ ಒಂದು ಸುಂದರ ಬದುಕಿನ ಆರಂಭವಾಗಬಹುದು



**ಡಾ.ರೇಖಾ ಉದಯ**

## ಗಜಲ್

ನಾವು ಆಡುವ ಮಾತುಗಳಲಿ ಮಿತಿಯಿರಬೇಕು
ಮಾಡುವ ಕಾರ್ಯಗಳಲೂ ಸತ್ಯತೆಯಿರಬೇಕು

ಒಳಿತು ಮಾಡುವವರ ಈ ಲೋಕ ನಿಂದಿಸುತ್ತದೆ
ಅವರು ಕೈಗೊಂಡ ಕೆಲಸದಲಿ ಸ್ಪಷ್ಟತೆಯಿರಬೇಕು

ಸತ್ಯವೂ ಕೂಡ ತನ್ನತನ ಸಾಬೀತು ಪಡಿಸಬೇಕಾಗಿದೆ
ನಿಂದೆ ಹೊಗಳಿಕೆ ಸಹಜವೇ ಸಹಿಸಿ ಮೌನವಿರಬೇಕು

ಹೂವಿಗೆ,ಮಾಗೋ ಹಣ್ಣಿಗೆ ಅದರ ಕಷ್ಟ ಏನೆಂದು ಗೊತ್ತು
ಒಳಿತಾದ ಕಾರ್ಯ ಮಾಡಿದಾಗ ಮೆಚ್ಚುವ ಗುಣವಿರಬೇಕು

ಜೋಗಿ ಎಲ್ಲರಿಗೂ ತಮ್ಮ ತಮ್ಮ ವಾದವೇ ಮುಖ್ಯವಾಗಿದೆ
ಬಂದನೋವು ಅಪಮಾನವ ಸಹಿಸುವ ತಾಳ್ಮೆಯಿರಬೇಕು

ಡಾ.ವೈ.ಎಂ.ಯಾಕೊಳ್ಳಿ



**ವೈ.ಎಂ.ಯಾಕೊಳ್ಳಿ**

## ಬಡವ ಬಲ್ಲಿದನೆಂಬ ತಾರತಮ್ಯ...!?

ನನಗೊಬ್ಬ ದಿನಗೂಲಿ ಕೆಲಸದವನು ಪರಿಚಯವಾಗಿದ್ದ. ಅವನು ದಿನದ ದುಡಿಮೆ ಎಷ್ಟು ಎಂದು ಕೇಳಿದಾಗ ಅಂದಾಜು 500 ರೂ. ಎಂದು ಹೇಳಿದ .ಅವನು ಹೆಂಡತಿ ದಿನದ ದುಡಿತ 300 ರೂ ಎಂದು ಹೇಳಿದ. ಅವನಿಗೆ 4 ಮಕ್ಕಳು.. ಖರ್ಚು ಎಷ್ಟು ಎಂದು ಕೇಳಿದಾಗ ಕುಡಿತ, ಬೀಡಿ, ಇತರ ಶೋಕಿ ಗಳಿಗೆ ಇಬ್ಬರು ಅಂದಾಜು 400 ರೂ ಖರ್ಚಾಗುತ್ತದೆ,ಉಳಿದ ಹಣದಲ್ಲಿ ವಾರಕ್ಕೆ 3ರಿಂದ 4 ದಿನ ಚಿಕನ್ಮಟನ್ , ಊಟ ಮಾಡಿಕೊಂಡು ಇದ್ದೇವೆ ಎಂದು ಹೇಳಿದ?ಅವನು ದೊಡ್ಡ ಮಗನನ್ನು 5 ನೆಯ ಕ್ಲಾಸ್ ಗೆ ಓದನ್ನು ನಿಲ್ಲಿಸಿದ್ದ.. ಏಕೆಂದರೆ ಅವನನ್ನು ಸಹ ದುಡಿಯಲು ಕಳುಹಿಸಲು.

ಈ ಗಂಡಹೆಂಡತಿಯರು ಕುಡಿತ, ಬೀಡಿ ಇತರ ಶೋಕಿ ಗಳನ್ನು ಕೈ ಬಿಟ್ಟು ಆ ಹಣವನ್ನು ಮಕ್ಕಳ ವಿದ್ಯಾಭ್ಯಾಸಕ್ಕೆ,ಅಥವಾ ಉಳಿತಾಯ ಮಾಡಿದ್ದರೆ ಅವನು ಸಹ ನೆಮ್ಮದಿಯ ಜೀವನ ನಡೆಸಬಹುದಿತ್ತು.. ಅವನು ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಿದ್ದರೆ ಅವರು ದಿನಗೂಲಿ ಬಿಟ್ಟು ಉತ್ತಮ ಕೆಲಸ ಮಾಡಿ ಹಣ ಗಳಿಸಿ ಶ್ರೀಮಂತರಾಗದಿದ್ದರೂ ಮಧ್ಯಮ ಜೀವನ ಶೈಲಿಯನ್ನು ಮಾಡಬಹುದಿತ್ತು.. ಅದೇ ಇನ್ನೊಂದು ಕುಟುಂಬ ಯಾವ ಚಟಗಳಿಲ್ಲದೇ , ತಮ್ಮ 2 ಮಕ್ಕಳಿಗೋಸ್ಕರ ದಿನದ ಒಂದು ಊಟವನ್ನು ತ್ಯಾಗ ಮಾಡಿ ಒಳ್ಳೆಯ ಶಾಲೆಗೆ ಸೇರಿಸಿ ವಿಧ್ಯಾಭ್ಯಾಸ ಕೊಡಿಸಿದಾಗ ಮಕ್ಕಳು ಒಳ್ಳೆಯ ಕೆಲಸ ಅಥವಾ ವ್ಯಾಪಾರದಂತ ಕೆಲಸ ಮಾಡಿ ಶ್ರೀಮಂತರಾಗುತ್ತಾರೆ ಅಂದರೆ ಒಂದು ಕುಟುಂಬ ತಮ್ಮ ಚಟ, ಶೋಕಿ ಗಳನ್ನು ಬಿಡದೇ ಚೆನ್ನಾಗಿ ಊಟ ಮಾಡಿಕೊಂಡು, 4 ಮಕ್ಕಳನ್ನು ಮಾಡಿಕೊಂಡು ಮತ್ತು ಮಕ್ಕಳ ಭವಿಷ್ಯದ ಬಗ್ಗೆ ದೂರದೃಷ್ಟಿಯಿಲ್ಲವಾದಾಗ ಅವರು ಬಡವರಾಗಿಯೇ ಉಳಿಯುತ್ತಾರೆ,ಅದೇ ಇನ್ನೊಂದು ಕುಟುಂಬ ಕೇವಲ 2 ಮಕ್ಕಳನ್ನು ಮಾಡಿಕೊಂಡು ಅವುಗಳಿಗೆ ತಮ್ಮ ಊಟವನ್ನೇ ತ್ಯಾಗ ಮಾಡಿ ಮಕ್ಕಳಿಗೆ ಒಳ್ಳೆಯ ವಿಧ್ಯಾಭ್ಯಾಸ ಕೊಡಿಸಿ , ಮಕ್ಕಳನ್ನು ಒಳ್ಳೆಯ ಮಟ್ಟಕ್ಕೆ ತಂದಾಗ ಅವರು ತ್ಯಾಗವೇ ಅವರನ್ನು ಕೆಲ ಮಟ್ಟಿಗೆ ಶ್ರೀಮಂತರಾಗಿರುಸುತ್ತದೆ.

ಕೆಲವರು, ಸರ್ಕಾರದಿಂದ ಎಲ್ಲಾ ಉಚಿತ ಅನುಕೂಲತೆಗಳನ್ನು ಪಡೆದು,ಆ ಹಣವನ್ನು ಶೋಕಿ ಮಾಡಿ ಕಳೆಯುತ್ತಾ, ಬಡವರಾಗಿಯೇ ಉಳಿದು ಕೊನೆಗೆ ತಮ್ಮ ಬಡತನಕ್ಕೆ ಸರ್ಕಾರವನ್ನೇ ದೂರುತ್ತಾರೆ.... ಅವರ ಮಕ್ಕಳು, ಮೊಮ್ಮಕ್ಕಳು ಬಡತನದಲ್ಲಿಯೇ ದಿನ ದೂಡುತ್ತಾರೆ. ಅವರು ಕೊನೆತನಕ ಸರ್ಕಾರವನ್ನು ದೂಷಿಸುತ್ತಾ ಕಾಲ ಕಳೆಯುತ್ತಾರೆ.



ಆದರೆ ಕೆಲವರು ಸರ್ಕಾರದಿಂದ ಯಾವ ಅನುಕೂಲತೆಗಳನ್ನು ಪಡೆಯದೇ ಇದ್ದರೂ, ಜೀವನದ ಕಷ್ಟಗಳನ್ನು ಅರ್ಥ ಮಾಡಿಕೊಂಡು ದುಡಿಯುವಾಗ ಉಳಿತಾಯ ಮಾಡಿ ಮತ್ತು ಸಾಲ ಮಾಡಿಯಾದರೂ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸಿ ಮಕ್ಕಳನ್ನು ಶ್ರೀಮಂತರನ್ನಾಗಿ ಮಾಡಿ, ತಾವು ಶ್ರೀಮಂತರಾಗುತ್ತಾರೆ. ಅವರ ಮಕ್ಕಳು ಸಹ ತಮ್ಮ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸಿ ಅವರ ವಂಶವೇ ಶ್ರೀಮಂತ ಜೀವನ ನಡೆಸುತ್ತಾ ಹೋಗುತ್ತಾರೆ.. ಇಷ್ಟೇ,ಬಡವ ಬಡವರಾಗಿಯೇ ಇರಲು ಕಾರಣ..ಶ್ರೀಮಂತ ಶ್ರೀಮಂತರಾಗುವ ಕಾರಣ.. ಚಟ,ಶೋಕಿ ಗಳನ್ನು ಬಿಡಿ,ಮಕ್ಕಳ ಭವಿಷ್ಯದ ಕಡೆ ಗಮನ ಕೊಡಿ..ನೀವೂ ಸಹ ಒಳ್ಳೆಯ ಜೀವನ ಸಾಗಿಸುತ್ತೀರಾ.

ಅಪ್ಪನಿಂದ ಬಂದ ಶ್ರೀಮಂತಿಕೆಯಲ್ಲಿ ವಿಜಯ್ ಮಲ್ಯಾ ಚಟ,ಶೋಕಿಗಳನ್ನು ರೂಡಿಸಿಕೊಂಡು ಎಲ್ಲವನ್ನೂ ಕಳೆದುಕೊಂಡು ದೇಶಭ್ರಷ್ಟನಾದ. ಅದೇ ಮುಖೇಶ್ ಅಂಬಾನಿ ಅಪ್ಪ ಮಾಡಿಟ್ಟ ಶ್ರೀಮಂತಿಕೆಯಲ್ಲಿ ಚಟ, ಶೋಕಿ ಗಳನ್ನು ಬೆಳಸಿಕೊಳ್ಳದೇ ಅಪ್ಪ ಮಾಡಿದ ಸಾಮ್ರಾಜ್ಯವನ್ನು ಬೆಳೆಸಿ ನಂಬರ್ ಒನ್ ಶ್ರೀಮಂತವಾದ, ಸಚಿನ್ ತೆಂಡೂಲ್ಕರ್ ಮತ್ತು ವಿನೋದ್ ಕಾಂಬ್ಳಿ, ಇಬ್ಬರು ಅಧ್ಭುತ ಪ್ರತಿಭೆಯುಳ್ಳ ಕ್ರಿಕೆಟಿಗರು. ಇಬ್ಬರಿಗೂ ಒಂದೇ ವಯಸ್ಸು, ಒಂದೇ ಪ್ರತಿಭೆ,ಒಂದೇ ಕ್ಲಬ್ ನಲ್ಲಿ ಟ್ರೈನಿಂಗ್ ತೆಗೆದುಕೊಂಡವರು. ಆದರೆ ವಿನೋದ್ ಕಾಂಬ್ಳಿ ತಮ್ಮ ಹುಡುಗಿಯರ,ಕುಡಿತದ ಚಟದಿಂದ ಕ್ರಿಕೆಟ್ ಎಂಬ ಗೋಲನ್ನೇ ಮರೆತು ಭಿಕಾರಿಯಾಗುವ ಹಂತ ತಲುಪಿದರು. ಆದರೆ ಸಚಿನ್ ತಮ್ಮ ಚಟಗಳಿಂದ ದೂರವಿದ್ದು, ತಮ್ಮ ಕ್ರಿಕೆಟ್ ಎಂಬ ಗೋಲನ್ನೇ ಗುರಿಯಾಗಿರಿಸಿಕೊಂಡು ಅತ್ಯುನ್ನತ ಸ್ಥಾನಕ್ಕೆ ಏರಿ ಸಾವಿರಾರು ಕೋಟಿ ಸಂಪಾದನೆ ಮಾಡಿ ಕೋಟ್ಯಾದೀಶ್ವರಾಗಿದ್ದಾರೆ. ಚಟ, ಶೋಕಿ ಗಳನ್ನು ಬಿಡಿ, ದೂರದೃಷ್ಟಿ ಇಟ್ಟುಕೊಂಡು ,ನಿಮ್ಮ ಗೋಲಿನ ಕಡೆ ಮಾತ್ರ ಗಮನವಿರಲಿ,ಖಂಡಿತ ಶ್ರೀಮಂತರಾಗುತ್ತೀರಾ...



**ನವೀನ ಹೆಚ್.ಎ**
**ಹನುಮನಹಳ್ಳಿ, ಕೆಆರ್ ನಗರ**

## ನಂಜುಂಡ 'ನೆಲದ ಕಾಡು' ಈ ಅಂಜೂರದ ಹುಡುಗಿ

**ತುಸು ಹಿರಿಯರನ್ನ ನಾವು ಓದಬೇಕು.ಅನ್ನುವುದಕ್ಕೆ ಎಂ.ಆರ್ ಕಮಲಾ ಅವರ ಈ ಕಾಡು ಅಂಜೂರದ ಹುಡುಗಿ ಸಂಕಲನ... ಓದಿದಾಗ ಖಂಡಿತ ಅರಿವಿಗೆ ಬರುತ್ತೆ. ಕವಯತ್ರಿ ತೀರಾ ಸಣ್ಣ ಸಂಗತಿಗಳನ್ನು ಅತ್ಯಂತ ಸೂಕ್ಷ್ಮವಾಗಿ ಅವಲೋಕಿಸಿ ಬರೆತ್ತಾ, ಅನುಭವವ ಒರೆ ಹಚ್ಚುತ್ತ, ಪದಗಳಿಗೆ ಜೋತು ಬೀಳದೆ, ಭಾವಕ್ಕೆ ಆತು ಕೂತು ತೂಗಡಿಸದೆ, ಕಾವ್ಯ ಆಗಲೇ ಬೇಕು ಎಂಬ ಜಿದ್ದಿಗೆ ಬೀಳದೆ... ಹನಿ ಹನಿಯಾಗಿ ಜಿನುಗುತ್ತ, ತೊರೆಯಾಗಿ, ಹಳ್ಳ,ಕೊಳ್ಳ ಬೇಲಿ ಸಾಲುಗಳ ದಾಟಿ ನದಿಯಾಗಿ ಒಮ್ಮೊಮ್ಮೆ ಅಲ್ಲಲ್ಲಿ ಧುಮ್ಮಿಕ್ಕಿ ಮತ್ತೆ ಒಮ್ಮೊಮ್ಮೆ ಸಲೀಲವಾಗಿ ಹರಿದು ಸಮುದ್ರ ಸೇರುವ ಪರಿಗೆ ಈ ಸಂಕಲನದ ಸಾರ್ಥಕತೆ ಇದೆ ಎನ್ನಿಸುತ್ತೆ.**

ಮನುಷ್ಯ ಸಂಘ ಜೀವಿ, ಓಡುವ, ಕೂಡುವ, ಸ್ಪರ್ಶಿಸುವ ಕುತೂಹಲಿ ಹೀಗೆ ಕೂಡುವ ಅವ ತನ್ನದಲ್ಲದ ಅನೇಕ ಸಂಗತಿಗಳ ತನ್ನದಾಗಿಸಿ ಕೊಳ್ಳುತ್ತ ಹಿಗ್ಗುತ್ತ ಸಾಗುವ ಅವನಲ್ಲದ ಅವನ ಹಿಡಿದಿಡುವ ಕವಿತೆ "ನನ್ನದೇ ನಿಘಂಟು"...ಸಾಲುಗಳನ್ನು ಒಮ್ಮೆ ನೋಡಿ
"ಯಾರ್ಯಾರೋ ಪದಗಳನ್ನು
ಸೇರಿಸುತ್ತಲೇ ಹೋದರು
ರೋಷ, ದ್ವೇಷ, ಅಸೂಯೆ...
ನನ್ನದಲ್ಲದ ಎಷ್ಟೊಂದು
ಫೇಸ್ ಬುಕ್ಕಿನ ಪದಗಳು!"
ಸ್ವ ವಿಮರ್ಶೆ ಮಾಡಿ ಕೊಳ್ಳುತ್ತ...ಕವಯತ್ರಿ ಬಯಸುವ ಇದೆ ಕವಿತೆಯ ಕೊನೆಯ ಸಾಲುಗಳು..
"ಚಿಗುರು ಪದಗಳು ಸೇರುವ ಮುನ್ನ
ಕೊಳೆತದ್ದನ್ನೆಲ್ಲ ಕಿತ್ತೆಸೆಯಬೇಕಿದೆ...
ನನ್ನದೇ ನಿಘಂಟಿಗೆ ಮರಳಬೇಕಿದೆ "
ಒಂದು ಸ್ವಸ್ತ ಸಮಾಜಕ್ಕೆ ಇನ್ನೇನು ಬೇಕು. ಅಲ್ವಾ....

ಪ್ರತಿ ಕವಿತೆ ಓದಿದಾಗಲೂ ಭಾವದ ಹೃದಯವನ್ನೇ ಅದ್ದಿ ತೆಗೆದಂತೆ ಬರೆದಿರುವ ಕಮಲಮ್ಮ... ಮನೆಯೆಂದರೆ ಎನ್ನುತ್ತಾ ಹಾಕುವ ಪ್ರತಿ ಅಚ್ಚು ಪಂಜರ, ವಸ್ತು ಸಂಗ್ರಹಾಲಯ, ಸ್ಮಾರಕ, ಜಗತ್ತು ಎನ್ನುವಾಗ ನಿಮಗೆ ಹೌದಲ್ವಾ ಅನ್ನಿಸದೆ ಇರದು.. ಆದ್ರೆ ಅಷ್ಟೇ ಆಗಿದ್ರೆ ಕವಿತೆಯ ಆರದ್ರತೆ ನಮ್ಮನ್ನು ತಾಗುತ್ತಿರಲಿಲ್ಲವೇನು ಆದ್ರೆ ಅವರು ಕೊನೆಗೆ ಎಸೆಯುವ ಪ್ರಶ್ನೆ ಇದೆಯಲ್ಲ ಅದು... ಉಳ್ಳವರ ಮತ್ತೂ ಇರದಿರುವವರ ಕಂದಕಕ್ಕೆ ಕೈ ಹಾಕಿ ನಿಮ್ಮ ಎದೆ ಕಲುಕುತ್ತೆ....




ಹೀಗೆ... ಇದ್ದವರಿಗೆ ಹೂದೋಟ, ನೋಟ, ಕೂಟ, ಮಾಟ
ಮನೆ ಇಲ್ಲದವರಿಗೆ? ಮನೆಯಿಂದ ಮನೆಗೆ
ಅಲೆವವರಿಗೆ ಮನೆಯೊಂದು....
ನೀವೇ ಬರೆದು ಕೊಂಡು ಬಿಡಿ!
ಎನ್ನುವಾಗ ಕನಸು ಅನ್ನಿಸಿದರೂ... ನಿಮ್ಮ ವ್ಯಾಕುಲತೆ ಮಾತ್ರ ದಾಟಲಾಗುವುದಿಲ್ಲ. ಕವಿಯ ಮೂಲ ಗುಣವೇ ಸ್ಥಾಪಿತ ಕಲ್ಪನೆಗಳ ಮುರಿವ,ಮತ್ತೂ ಸ್ಥಾಪಿತ ಮಿತ್ ಗಳ ಪ್ರವಾಹಕ್ಕೆ ಎದುರಾಗಿ ಈಜಿ ಹೊಸ ಕಣ್ಣು, ಹೃದಯ ತೆರೆಸುವ ಕೆಲಸ.ಕನ್ನಡ ಕಾವ್ಯ ಮತ್ತೂ ಆ ನೆಲೆಯಲ್ಲಿ ಸ್ತ್ರೀ ಸಾಹಿತ್ಯ, ಪ್ರಶಸ್ತಿ ಇವುಗಳ ನೋಡುವ ಬಗೆಯ ಕುರಿತು ಕವಿತೆ ಉದಾಹರಣೆಗೆ...
"ಬರೆಯುವ ಹೆಣ್ಣುಮಕ್ಕಳೇ "
ಕವಿತೆಯ ಸಾಲುಗಳೇ ಸಾಕ್ಷಿ..
ಬರೆಯುವ ಹೆಣ್ಣುಮಕ್ಕಳೆಲ್ಲ ರಾತ್ರೋ ರಾತ್ರಿ ಸೂಳೆಗಳಾಗುತ್ತಾರೆ..
ಹಾದರಕ್ಕಿಳಿದೇ ಪ್ರಶಸ್ತಿ ಪಡೆಯುತ್ತಾರೆ "
ಹೀಗೆ ವ್ಯಂಗದಲಿ ಬಾಯಿ ಚಪಲದವರಿಗೆ ಉತ್ತರಿಸುತ್ತ..
ಕೊನೆಯಲ್ಲಿ ಆಕ್ರೋಶದ ಕಟ್ಟೆ ಹೊಡೆದು ಹೀಗೆ ಹೇಳುತ್ತಾರೆ...
ಹೆಗ್ಗಣಗಳಿಗೆ ಬಿಲ ತೋಡಿ ತೋಡಿ ಕೊಡಬೇಡಿ
ಒಮ್ಮೆ ಕಟ್ಟಿಗೆಗಳ ಹೆಟ್ಟಿ ಬೆಂಕಿ ಹಚ್ಚಿ ಬಿಡಿ!
ಎನ್ನುವಾಗ ಇಡೀ ಸ್ತ್ರೀ ಸಾಹಿತ್ಯದ ನೋಡುವ ನೋಟ ಪುರುಷ ಜಗತ್ತು ಬದಲಿಸಿ ಕೊಳ್ಳುವ ತುರ್ತನ್ನೂ ಹೇಳುತ್ತೆ.
ಕೋಮು ದ್ವೇಷ ಉತ್ತುಂಗಕ್ಕೆ ಏರಿರುವ ಈ ಕಾಲದಲ್ಲಿ ಕವಿ ಸಮಾಜದ ಕೂಸು. ಆರೋಗ್ಯಕರ ಸಮಾಜ ಬಯಸುವ, ಅದು ಹಾದಿ ತಪ್ಪುವಾಗ ಎಚ್ಚರದ ಗಂಟೆಯಾಗುವ ಕೆಲಸ ಕವಿಯದ್ದು ಇಂತಹ ಎಚ್ಚರ ಹೇಗೆ ಮೆದು ಮತ್ತೂ ಹದ ಶಬ್ದಗಳಲ್ಲಿ ಅರಳಿ ಹೃದಯಕ್ಕೆ ನಾಟುವಂತೆ ಮಾಡಬಹುದು, ಅಷ್ಟೇ ವಿಷಾದ ಪೂರ್ಣವಾಗಿ ಹೇಳಬಹುದು ಎನ್ನಲು ಅವರ "ಇಲ್ಲೊಂದು " ಕವಿತೆ ಕನ್ನಡಿಯ ಹಾಗೆ ಇದೆ.
ಇಲ್ಲೊಂದು ಚಂದ್ರ ಹುಟ್ಟಿದರೆ
ಎಲ್ಲರಿದೆಯೂ ಬೆಳದಿಂಗಳಾಗಬೇಕಿತ್ತು...
ಇಲ್ಲೊಂದು ಮೊಳಕೆಯೊಡದರೆ
ಎಲ್ಲರಿದೆಯೂ ಹಸಿರಾಗಬೇಕಿತ್ತು.
ಆದರಿಲ್ಲಿ.. ನೋವು ಮತ್ತಾರದೋ ಎದೆಯ ನಲಿವಾಗುತ್ತಿದೆ... ಕವಯತ್ರಿ ಒಮ್ಮೊಮ್ಮೆ ಸ್ವಯಂ ಪ್ರಶ್ನೆಹಾಕಿ ಕೊಳ್ಳುತ್ತ ಶೋಧಕ್ಕೆ ಇಳಿಯುತ್ತ... ಹೊಸ ಕಣ್ಣೋಟಗಳ ಕಂಡು ಕೊಳ್ಳುವ ಬಗೆ ಕೂಡ ನಿಮಗೆ ಇಷ್ಟ ಆಗಬಹುದು.
ಹೊಸ ಹೊಳವುಗಳ ನೀಡಿ ಬೆರಗು ಗೊಳಿಸುವ ಕವಯತ್ರಿ ತಾವು ಕಂಡ ಸಣ್ಣ ಸಣ್ಣ ಸಂಗತಿಗಳ ಮೇಲೂ ಕವಿತೆ ಬರೆದು ಹಗುರಗಿದ್ದಾರೆ ಯಾವುದೇ ದಾವಂತವಿಲ್ಲದೆ.
ಇಡೀ ಸಂಕಲನದಲ್ಲಿ ಅದೆಷ್ಟು ಆಶಾವಾದ, ಜೀವನ ಪ್ರೀತಿ ತುಂಬಿ ತುಳಿಕಿದೆ. ಅದು ಸಹಜವಾಗಿ ಯಾವುದೇ ವಿದ್ವತ್ತಿನ ಪ್ರದರ್ಶನ ವಿಲ್ಲದೆ. ಅದೇ ಈ ಸಂಕಲನದ ಹೆಚ್ಚು ಗಾರಿಕೆ.
"ಮಾತ ನಾಡುತ್ತಲೇ ಇರು "
"ಯಾರಿಗೇಕೆ ಒಪ್ಪಿಸಬೇಕು"
" ಕಾಯುತ್ತಿರಬೇಕು " ಮುಂತಾದ ಕವಿತೆಗಳು ಉದಾಹರಣೆಯಾಗಿ ನೀಡಬಹುದು.
ಅದೆಷ್ಟು ಹೇಳಿದರೂ ಹೇಳದೆ ಉಳಿಯುವ ಸಂಗತಿಗಳೇ ಹೆಚ್ಚು ಎಂಬ ಪ್ರಜ್ಞೆಯನ್ನು ಜೀವಂತ ಇಡುತ್ತ ನನ್ನ ಮಾತುಗಳಿಗೆ ವಿರಾಮ ಇಡುತ್ತೇನೆ. ಈ ಸಂಕಲನದಲ್ಲಿ ಒಟ್ಟು 53 ಕವಿತೆಗಳಿವೆ.ಕಾವ್ಯ ಮನೆ ಪ್ರಕಾಶನ ಇದನ್ನ ಪ್ರಕಟಿಸಿದೆ. ಮುನ್ನುಡಿ, ಬೆನ್ನುಡಿಗಳ ಭಾರವಿಲ್ಲದೆ ಸಂಕಲನ ಪ್ರಕಟವಾಗಿದೆ.

**ದೇವರಾಜ್ ಹುಣಸಿಕಟ್ಟಿ ರಾಣೇಬೆನ್ನೂರ್**

# ಜಿಲ್ಲೆಯಾದ್ಯಾಂತ ನಡೆದ ರಾಷ್ಟ್ರೀಯ ಲೋಕ್ ಅದಾಲತ್ ಗೆ ಕಕ್ಷಿದಾರರ ಅಭೂತಪೂರ್ವ ಸ್ಪಂದನೆ

ಅ.ಶ. ಸುದ್ದಿ ವಿಜಯಪುರ



**ವಿಜಯಪುರ: ಜಿಲ್ಲೆಯಲ್ಲಿ ರಾಷ್ಟ್ರೀಯ ಲೋಕ್ ಅದಾಲತ್ ಯಶಸ್ವಿಯಾಗಿ ನಡೆದಿದ್ದು, ಕ್ಷಿದಾರರು ಹಾಗೂ ವಕೀಲರ ಸಹಕಾರದಿಂದ ವಿವಿಧ ನ್ಯಾಯಾಲಯಗಳಲ್ಲಿ ವಿಚಾರಣೆ ಇದ್ದ ಹಲವಾರು ಪ್ರಕರಣಗಳ ಪೈಕಿ ಒಟ್ಟು 10925 ಪ್ರಕರಣಗಳು ರಾಜೀ ಸಂಧಾನದ ಮೂಲಕ ಇತ್ಯರ್ಥಗೊಂಡಿವೆ. ಅವುಗಳಲ್ಲಿ, ಆಸ್ತಿ ವಿಭಾಗ ಕೋರಿದ ದಾವೆಗಳು, ಚೆಕ್ ಬೌನ್ಸ್ ಪ್ರಕರಣಗಳು, ಮೋಟಾರು ವಾಹನ ಅಪಘಾತ ಪರಿಹಾರ ಕೋರಿದ ಪ್ರಕರಣ.ಗಳು, ಜೀವನಾಂಶ ಕೋರಿ ಸಲ್ಲಿಸಿದ ಪ್ರಕರಣಗಳು ರಾಜಿಯಾಗಬಹುದಾ ಕ್ರಿಮಿನಲ್ ಪ್ರಕರಣಗಳು ಹಾಗೂ ಅಮಲಾರಿ ಪ್ರಕರಣಗಳು ಸೇರಿವೆ.**

ಮಾನ್ಯ ಹರೀಶ, ಎ. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಅಧ್ಯಕ್ಷರು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ವಿಜಯಪುರ ಅವರು ಈ ಸಂದರ್ಭದಲ್ಲಿ ತಿಳುವಳಿಕೆ ನೀಡಿ ಕಕ್ಷಿದಾರರು ಬಹಳ ವರ್ಷ ಅಲೆದಾಡುವ ಬದಲು ಜನತಾ ನ್ಯಾಯಾಲಯದಲ್ಲಿ ರಾಜೀ ಸಂಧಾನದ ಮೂಲಕ ತಮ್ಮ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಂಡರೆ ಹಣ ಮತ್ತು ಸಮಯ ಎರಡು ಉಳಿಯುತ್ತದೆ. ಆದ್ದರಿಂದ ಸಾರ್ವಜನಿಕರು ಜನತಾ ನ್ಯಾಯಾಲಯದ ಸದುಪಯೋಗ ಪಡೆದುಕೊಳ್ಳಬೇಕೆಂದು ಕರೆ ಕೊಟ್ಟರು. ಮಾನ್ಯ ಅರವಿಂದ ಸಾಯಬಣ್ಣ ಹಾಗರಗಿ, ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಜಿಲ್ಲಾ, ಕಾನೂನು ಸೇವೆಗಳ ಪ್ರಾಧಿಕಾರ ವಿಜಯಪುರ ಅವರು ಮಾತನಾಡಿ, ಜನತಾ ನ್ಯಾಯಾಲಯದಲ್ಲಿ... ರಾಜೀ ಸಂಧಾನದ ಮೂಲಕ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಂಡು ಸಾರ್ವಜನಿಕರು. ಶೀಘ್ರ ನ್ಯಾಯ ಪಡೆದುಕೊಂಡು ಪರಸ್ಪರ ಸೌಹಾರ್ದತೆಯಿಂದ ಸಮಾಜದಲಿ ಜೀವನ ಸಾಗಿಸಬೇಕೆಂದು ಸಲಹೆ ನೀಡಿದರು. ಅಲದೇ, ವಿಜಯಪುರ ಜಿಲ್ಲೆ ಮತ್ತು ತಾಲ್ಲೂಕು ಒಳಗೊಂಡು ಸುಮಾರು 07 ಜೋಡಿಗಳು ಜನತಾ ನ್ಯಾಯಾಲಯದಲ್ಲಿ ರಾಜಿ ಸಂಧಾನದ ವೈವಾಹಿಕ ಜೀವನ ನಡೆಸಲು ಒಪ್ಪಿಕೊಂಡು ಒಂದಾಗಿ ಹೋದರು, ಸದರಿ ರಾಷ್ಟ್ರೀಯ ಲೋಕ್ ಅದಾಲತನಲ್ಲಿ 96 ಭೂ ಸ್ವಾಧೀನ ಪ್ರಕರಣಗಳು ಮತ್ತು 312 ಭೂ ಸ್ವಾಧೀನ ದರಕಾಸ್ತ್ರ ಪ್ರಕರಣಗಳು ಇತ್ಯರ್ಥಗೊಂಡು ರೂ 31,41,56,802 ಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಗಳಿಸಲಾತು, ಸದರಿ ರಾಷ್ಟ್ರೀಯ ಜನತಾ ನ್ಯಾಯಾಲಯದಲ್ಲಿ ಜಿಲ್ಲಾ ನ್ಯಾಯಾಧೀಶರಾದ ಮಾನ್ಯ ಪಾಟೀಲ್ ಮೋಹನಕುಮಾರ ಭೀಮನಗೌಡ, ಸಚೀನ್ ಕೌಶಿಕ, ಆರ್. ಎನ್. ಅಬ್ದುಲ್ ರಹಮಾನ ನಂದಗಡಿ, ಖಾದರಸಾಬ ಹುಸೇನಸಾಬ ಬೆನಕಟ್ಟಿ, ಗಂಗಪ್ಪ . ಇರಪ್ಪ ಪಾಟೀಲ, ಸಿಂಧೂ ಪೊತದಾರ, ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರಾದ ಶ್ರೀಕಾಂತ ಎನ್ ಎ. ರಾಚೋಟಿ ಮಹಗುಂಡಪ್ಪ ಶಿರೂರು, ಮಹಾಜನ ರಮೇಶ ಅಪ್ಪಾಸಾಬ, ಮಹೇಶ ಚಂದ್ರಕಾಂತ,

ಸಮೀರ ಕೊಳ್ಳಿ, ಕಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರಾದ ಪರಿಮಳಾ ತುಬಾಕಿ, ದಸ್ತಗೀರ್ ಸಾಬ್ ಅಬ್ದುಲ್ ರಜಕ್ ಮುಲಾ, ಜ್ಯೋತಿ ಅಶೋಕ್ ಪತ್ರರ್,ತೇಜಶ್ರೀ ಆರ್. ರಂಜೀತಾ ಎಸ್ ಕೆ. ತುಷಾರ ಸಂಜಯ ಸದಲಗೆ ಮತ್ತು ಶ್ರೀಮತಿ ವಿ. ಬಿ. ಮುತಾಲಿಕದೇಸಾಯಿ, ಸದಸ್ಯರು, ಡಿಸ್ಟ್ರಿಕ್ಟ್ ಕಂಪ್ಯೂಮರ್ ರಿಡ್ರೆಸಲ್ ಕಮಿಷನ್ ವಿಜಯಪೂರ ಹಾಗೂ ಸಂಧಾನಕಾರ ವಕೀಲರುಗಳಾದ ಮಠದ ದುಂಡಯ್ಯ, ಎಮ್. ಎಸ್. ಇನಾಮದಾರ್, ಅಶೋಕ ಹೆಚ್, ಜೈನಾಪೂರ, ಸುನಂದ ಒಂಕಾರ, ಜಯಶ್ರೀ, ಜಿ, ಮಠಪತಿ, ಸಂಜಯ ಕೆ. ಗುದ್ದೇವಾಡಿ, ಪಿ. ಬಿ. ಪಾಟೀಲ್, ರೂಪಾ ಎಸ್. ಕೂಡಗಿ, ಎಸ್. ಎಸ್. ಇನಾಮದಾರ, ಪಾಟೀಲ್ ವಿದ್ಯಾ ಮಹಾದೇವಪ್ಪಾ, ಹೈದರಾಲಿ ಮಕಾಂದರ, ಬಡಿಗೇರ ಯಲ್ಲಪ್ಪ ಭೋಗಪ್ಪ, ಚೇತನ ಪಟ್ಟಣಶೆಟ್ಟಿ,ಬಿ. ಕೆ. ಮಠ,ಯು.ಡಿ ರಾಠೋಡ, ಅವರುಗಳು ಸಂಧಾನಕಾರ ವಕೀಲರಾಗಿ ಪ್ರಕರಣದ ರಾಜೀ ಸಂಧಾನ ಮಾಡಿಸುವಲ್ಲಿ ಯಶಸ್ವಿಯಾದರು.

ವಿಜಯಪುರ ಜಿಲ್ಲೆ ಮತ್ತು ಅದರ ವಕೀಲರು, ಕಕ್ಷಿದಾರರು, ಪೊಲೀಸ್ ಎಲ್, ಎ, ಡಿ ,ಸಿ ಎಲ್ಲ ಸಿಬ್ಬಂಗಳು ಜನತಾ ನ್ಯಾಯಾಲಯದ ಯಶಸ್ಸಿಗೆ ಎಲ್ಲಾ ಕೆ.ಬಿ.ಜನಲ್ ಅಧಿಕಾರಿಗಳು, ಅಧೀನದಲ್ಲಿ ಬರುವ ವಕೀಲರ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಮತ್ತು ಅಧಿಕಾರಿಗಳು, ಸಿಬ್ಬಂದಿಗಳು ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ರಾಷ್ಟ್ರೀಯ ಲೋಕ್ ಅದಾಲತನಲ್ಲಿ ಭಾಗವಹಿಸಿದ್ದರು. ಈ ರಾಷ್ಟ್ರೀಯ ಲೋಕ್ ಅದಾಲತನಲ್ಲಿ ಸಹಭಾಗಿಯಾದ ಸಾರ್ವಜನಿಕರಿಗೆ, ಕಕ್ಷಿದಾರರಿಗೆ, ಪಕ್ಷಗಾರರ ಪರ ವಕೀಲರುಗಳಿಗೆ ಹಾಗೂ ಪರೋಕ್ಷ ಮತ್ತು ಪ್ರತ್ಯಕ್ಷವಾಗಿ ಸಹಕರಿಸಿದ ಎಲ್ಲರ ಸಹಕಾರಕ್ಕೆ ಶ್ರೀ ಹರೀಶ ಎ ಗೌರವಾನ್ವಿತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಅಧ್ಯಕ್ಷರು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ವಿಜಯಪೂರ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

## ಸ್ವಚ್ಛತೆ ಹೀ ಸೇವಾ ಅಭಿಯಾನ ಕುರಿತು ಜನಜಾಗೃತಿ ಮೂಡಿಸುವ ಕಾರ್ಯಕ್ರಮ

ಅ.ಶ. ಸುದ್ದಿ ಸಿಂಧನೂರು

**ಸಿಂಧನೂರು: ತಾಲೂಕಿನ ಸಮೀಪದ ಆರ್.ಎನ್. ನಗರ ಕ್ಯಾಂಪ್‌ನಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಜವಳಗೇರಾ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಿಂಧನೂರು ವತಿಯಿಂದ ಸ್ವಚ್ಛತೆ ಹೀ ಸೇವಾ ಅಭಿಯಾನ ಹಮ್ಮಿಕೊಳ್ಳಲಾಯಿತು.**



ಕಾರ್ಯಕ್ರಮದಲ್ಲಿ ಮಾತನಾಡಿದ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಾಲಪ್ಪ ನಾಯಕ ಅವರು, ಸ್ವಚ್ಛತೆ ಹೀ ಸೇವಾ ಅಭಿಯಾನವು ಸೆಪ್ಟೆಂಬರ್ 17 ರಿಂದ ಅಕ್ಟೋಬರ್ 2 ರವರೆಗೆ ನೆಡೆಯಲಿದ್ದು, ಸಾರ್ವಜನಿಕರಲ್ಲಿ ಸ್ವಚ್ಛತೆಯ ಕುರಿತು ಅರಿವು ಮೂಡಿಸುವುದು ಇದರ ಮುಖ್ಯ ಉದ್ದೇಶವಾಗಿದೆ ಎಂದು ತಿಳಿಸಿದರು. ಶ್ರಮದಾನದ ಮೂಲಕ ತ್ಯಾಜ್ಯ ವಿಲೇವಾರಿ, ಸಾರ್ವಜನಿಕ ಸ್ಥಳಗಳು, ಶಾಲೆಗಳು ಹಾಗೂ ಕಚೇರಿಗಳಲ್ಲಿ ಸ್ವಚ್ಛತಾ ಕಾರ್ಯಗಳನ್ನು ಕೈಗೊಳ್ಳುವುದು ಮತ್ತು ವಿದ್ಯಾರ್ಥಿಗಳಲ್ಲಿ ಸ್ವಚ್ಛತೆಯ ಮಹತ್ವದ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದರು. ಸ್ವಚ್ಛತೆಯಿಂದ ಆರೋಗ್ಯದ ಗುಣಮಟ್ಟ ಹೆಚ್ಚುವುದರಿಂದ ಪ್ರತಿಯೊಬ್ಬರೂ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಕರೆ ನೀಡಿದರು. ಇದೇ ವೇಳೆ ಸ್ವಚ್ಛತೆಗಾಗಿ ಪ್ರತಿಯೊಬ್ಬರೂ 100 ಗಂಟೆಗಳನ್ನು ಮೀಸಲಿಡುವ ಪ್ರತಿಜ್ಞಾವಿಧಿಯನ್ನು ಬೋಧಿಸಿದರು. ನಂತರ ಮಾತನಾಡಿದ ಪ್ರಾಥಮಿಕ ಆರೋಗ್ಯ ಸುರಕ್ಷಾ ಅಧಿಕಾರಿ ನಿಂಗಮ್ಮ ಅವರು, ಮಹಾತ್ಮ ಗಾಂಧೀಜಿಯವರು ಕಂಡ ಸ್ವಚ್ಛ ಭಾರತದ ಕನಸನ್ನು ನನಸು ಮಾಡಲು ಪ್ರತಿಯೊಬ್ಬರೂ ಸ್ವಚ್ಛತಾ ಸೇವಾ ಪ್ರತಿಜ್ಞೆಯನ್ನು ಸ್ವೀಕರಿಸಬೇಕು ಎಂದು ತಿಳಿಸಿದರು. ನಾನು ನನ್ನ ಮನೆ, ಶಾಲೆ, ಕಚೇರಿ ಹಾಗೂ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಡುತ್ತೇನೆ, ಕಸವನ್ನು ಎಲ್ಲೆಂದರಲ್ಲಿ ಬಿಸಾಡದೆ ನಿಗದಿತ ಸ್ಥಳದಲ್ಲೇ ವಿಲೇವಾರಿ ಮಾಡುತ್ತೇನೆ, ಸಾರ್ವಜನಿಕ ಸ್ಥಳಗಳ ಸ್ವಚ್ಛತೆಯನ್ನು ಕಾಪಾಡಿಕೊಳ್ಳುತ್ತೇನೆ ಹಾಗೂ ಇತರರಲ್ಲೂ ಸ್ವಚ್ಛತೆಯ ಬಗ್ಗೆ ಜಾಗೃತಿ ಮೂಡಿಸುತ್ತೇನೆ, ಪ್ಲಾಸ್ಟಿಕ್ ಬಳಕೆಯನ್ನು ತ್ಯಜಿಸುತ್ತೇನೆ ಮತ್ತು ಸ್ವಚ್ಛ ಭಾರತ ನಿರ್ಮಾಣಕ್ಕೆ ನನ್ನಿಂದಾಗುವ ಸಂಪೂರ್ಣ ಸಹಕಾರ ನೀಡುತ್ತೇನೆ ಎಂಬ ಪ್ರತಿಜ್ಞಾವಿಧಿಯನ್ನು ಬೋಧಿಸಿ ಶ್ರಮದಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಆಶಾ ಕಾರ್ಯಕರ್ತೆ ಮಾಲಾಶ್ರೀ, ಅಂಗನವಾಡಿ ಕಾರ್ಯಕರ್ತೆ ಈರಮ್ಮ, ತಾಯಂದಿರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ಸತಿ ಪತಿ ಒಂದಾಗಿಸಿದ ಲೋಕ ಅದಾಲತ

## 2637 ಪ್ರಕರಣ ಇತ್ಯರ್ಥ : ಒಂದು ಕೋಟಿ 71 ಲಕ್ಷ ಸಂದಾಯ

ಅ.ಶ. ಸುದ್ದಿ ಇಂಡಿ

**ಇಂಡಿ: ವರ್ಷದ ಮೂರನೆಯ ಲೋಕ ಅದಾಲತನಲ್ಲಿ ವೈವಾಹಿಕ ಪ್ರಕರಣವನ್ನು ಇತ್ಯರ್ಥ ಪಡಿಸಲಾಗಿದೆ. ಪುಂಡಲೀಕ ತಮ್ಮಣ್ಣ ರೂಗಿಯವರು ತಮ್ಮ ಸಂಗಾತಿ ಭಾರತಿಯವರೊಂದಿಗೆ ಮರು ಜೀವನ ನಡೆಸಲು ಶ್ರೀ ಕೊಟೆಪ್ಪ ಕಾಂಬಳೆ ಹಿರಿಯ ದಿವಾನಿ ನ್ಯಾಯಾಧೀಶರು ಸತಿ ಪತಿ ಒಂದುಗೂಡಿಸಿದರು. ರಾಷ್ಟ್ರೀಯ ಲೋಕ ಅದಾಲತ್ ನಲ್ಲಿ 2637 ಪ್ರಕರಣಗಳು ಇತ್ಯರ್ಥ ಗೊಂಡಿವೆ ಮತ್ತು ಒಂದು ಕೋಟಿ 71 ಲಕ್ಷ ರೂ ಸರಕಾರಕ್ಕೆ ಸಂದಾಯವಾಗಿದೆ ಎಂದು ಹಿರಿಯ ದಿವಾನಿ ನ್ಯಾಯಾಧೀಶ ಕೋಟಪ್ಪ ಕಾಂಬಳೆ ತಿಳಿಸಿದರು.**



ನ್ಯಾಯಾಲಯದ ಆವರಣದಲ್ಲಿ ನಡೆದ ರಾಷ್ಟ್ರೀಯ ಲೋಕ ಅದಾಲತ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ರಾಜಿ ಮೂಲಕ ನ್ಯಾಯ ಇತ್ಯಥ–ರ್ದಿಂದ ನ್ಯಾಯಾಲಯಗಳಿಗೆ ಅಲೆದಾಟ ತಪ್ಪುತ್ತದೆ. ಪರಸ್ಪರ ಸೌಹಾರ್ದ ಬೆಳೆಯುತ್ತದೆ. ಸಾರ್ವಜನಿಕರು ಸಹ ರಾಜಿ ಸಂಧಾನಕ್ಕೆ ಆದ್ಯತೆ ನೀಡಿ ಪ್ರಕರಣ ಇತ್ಯರ್ಥದ ಮೂಲಕ ನೆಮ್ಮದಿ ಜೀವನ ನಡೆಸಲು ಮುಂದೆ ಬರಬೇಕು ಎಂದರು. ದಿವಾಣಿ ನ್ಯಾಯಾಧೀಶರು ಸುನೀಲಕುಮಾರ ಎಮ್.ಎಸ್, ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ವಿಕಾಶ ದಳವಾಯಿ ಇವರ ಸಮ್ಮುಖದಲ್ಲಿ ರೂಗಿ ದಂಪತಿಗಳು ಒಂದಾಗಿ ಪರಸ್ಪರ ಹೂ ಮಾಲೆ ಹಾಕಿಕೊಂಡು ಸಿಹಿ ಹಂಚಿ ಸಂಭ್ರಮಿಸಿದರು.

ಪಿ.ಜೆ.ಹಂಜಗಿ, ಎಮ್,ಎಮ್ ಕುಲಕರ್ಣಿ, ಸಹಾಯಕ ಸರಕಾರಿ ಅಭಿಯೋಜಕ ರಾಖಿ ಕಟ್ಟಿಮನಿ,ಎಸ್.ಆರ್.ಬಿರಾದಾರ, ಬಿ.ಎಸ್.ತಳವಾರ, ಆರ್.ಎಮ್ ಪಾಟೀಲ,ಡಿ. ಎಸ್. ಹಾಲಕವಡಿ, ವಿ.ಜಿ.ಗಾಯಕವಾಡ, ಶ್ರೀಮತಿ ಪಿ.ಬಿ.ಬಬಲೇಶ್ವರ, ಎಸ್. ಎಮ್ ಬಬಲಾದ ಮತ್ತಿತರಿದ್ದರು.

ಫೋಟೋ– 21 ಇಂಡಿ 01

ಇಂಡಿಯಲ್ಲಿ ನಡೆದ ಲೋಕ ಅದಾಲತನಲ್ಲಿ ಸತಿ ಪತಿಗಳು ಹಿರಿಯ ದಿವಾಣಿ ನ್ಯಾಯಾಧೀಶ ಕೋಟೆಪ್ಪ ಕಾಂಬಳೆ ಇವರ ನೇತೃತ್ವದಲ್ಲಿ ಒಂದಾದರು

# ಬ್ರಾಹ್ಮಣರಲ್ಲಿದೆ ಎಲ್ಲರನ್ನೂ ಒಟ್ಟಿಗೆ ಕರೆದುಕೊಂಡು ಹೋಗುವ ಶಕ್ತಿ



ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ರಾಮಕೃಷ್ಣಹೆಗಡೆ, ದಿನೇಶ ಗುಂಡುರಾವ್, ಆರ್.ವಿ. ದೇಶಪಾಂಡೆ ಸೇರಿದಂತೆ ಅನೇಕರ ರಾಜಕೀಯ ನಾಯಕರು ಸಮಾಜದ ಅಭಿವೃದ್ಧಿಗೆ ಕೆಲಸ ಮಾಡಿದ್ದೇನೆ. ಸಮಾಜದ ಸಂಘಟನೆ ಚುರುಕಾಗಿ ಆದರೆ ಮಾತ್ರ ನಮ್ಮ ಶಕ್ತಿ ತೋರಿಸಲು ಸಾಧ್ಯವಾಗುತ್ತದೆ ಎಂದು ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಅಸಗೋಡು ಜಯಸಿಂಹ ಹೇಳಿದರು.**

ನಗರದ ಕಿನ್ನಾಳ ರಸ್ತೆಯಲ್ಲಿನ ವಿಠ್ಠಲ ಕೃಷ್ಣ ಸಭಾಭವನದಲ್ಲಿ ಸೋಮವಾರ ನಡೆದ ಕಲ್ಯಾಣ ಕರ್ನಾಟಕ ವಿಪ್ರ ಅಡುಗೆದಾರರು ಹಾಗೂ ಅಡುಗೆ ಸಹಾಯಕರ ಕ್ಷೇಮಾಭಿವೃದ್ಧಿ ಸಂಘದ ತೃತೀಯ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದ ಅವರು ಯಾವ ಜನ್ಮದ ಪುಣ್ಯವೋ ಏನೋ ಇಂದು ನಾನು ಮಂಡಳಿ ಅಧ್ಯಕ್ಷನಾಗಿದ್ದೇನೆ. ಆ ಮೂಲಕ ಸಮಾಜಕ್ಕೆ ಸೇವೆ ಸಲ್ಲಿಸುವ ಸೌಭಾಗ್ಯ ನನಗೆ ಒದಗಿದೆ. ಈವರೆಗೆ ಸರ್ಕಾರದಿಂದ 54 ಕೋಟಿ ರೂಪಾಯಿ ಹಣವನ್ನು ಸಮಾಜದ ಅಭಿವೃದ್ಧಿಗೆ ಒದಗಿಸಿರುವ ಧನ್ಯತಾ ಭಾವ ನನ್ನಲ್ಲಿದೆ. ಅದೇ ರೀತಿ ಸಮಾಜವನ್ನು ಮುನ್ನಡೆಸುವ ಕೆಲಸ ನಮ್ಮೆಲ್ಲರ ಮೇಲಿದೆ. ಕೇವಲ ಬ್ರಾಹ್ಮಣರಿಂದ ಮಾತ್ರ ಅಭಿವೃದ್ಧಿ ಸಾಧ್ಯವಿಲ್ಲ. ಇತರೆ ವರ್ಗದ ಜನರ ಸಹಕಾರ ಕೂಡ ನಾವು ಸಮಾಜ ಕಟ್ಟಲು ಅವಶ್ಯವಾಗಿದೆ ಎಂದರು.

ನಮ್ಮದು ಸಣ್ಣ ಸಮುದಾಯವಾದರೂ ಉಳಿದೆಲ್ಲರಿಗಿಂತ ನಮ್ಮ ಸಾಧನೆ, ಆಲೋಚನಾ ಕ್ರಮ ವಿಭಿನ್ನವಾಗಿದೆ. ನಮ್ಮ ಮಾರ್ಗದರ್ಶನದಿಂದ ಸಾಧನೆ ಮಾಡಿದವರು ಸಮಾಜದಲ್ಲಿ ಸಾಕಷ್ಟು ಜನರಿದ್ದಾರೆ. ಮತ್ತೊಬ್ಬರ ಖುಷಿಯಲ್ಲಿ ತಾವು ನೆಮ್ಮದಿ ಕಾಣುವುದು ಬಾಹ್ಮಣರಲ್ಲಿನ ವಿಶಿಷ್ಟ ಭಾವನೆ. ಪ್ರಸ್ತುತ ನಮ್ಮ ಸಂಖ್ಯೆ ಕಡಿಮೆ ಇರಬಹುದು. ನಾವೂ ಕೂಡ ಈ ಸಮಾಜಕ್ಕೆ ಮುಖ್ಯವಾಗಿ ಬೇಕೇ ಬೇಕು. ನಮ್ಮಿಂದ ಏನು ಮಾಡಲು ಸಾಧ್ಯ? ಎಂದು ಚುನಾವಣೆಗಳಲ್ಲಿ ಅಸಡ್ಡೆ ತೋರಿದರೆ ಸಮಾಜ ಖಂಡಿತವಾಗಿ ನಾಶವಾಗಲಿದೆ. ಹಾಗಾಗಿ ಸೂಕ್ಷ್ಮವಾಗಿ ಇದನ್ನೆಲ್ಲ ಅವಲೋಕಿಸಿ ಮುನ್ನಡೆಯುವುದು ಸೂಕ್ತ. ಏಕೆಂದರೆ ಯಾರಿಗೆ ಬೆಂಬಲ ಕೊಡಬೇಕು ಎಂಬುದು ನಮ್ಮ ಹಕ್ಕು.

ಯಾವತ್ತೂ ಜಾತಿ, ತಾರತಮ್ಯ ಮಾಡದೆ ಸಮಾಜಮುಖಿ ಚಿಂತನೆಗಳನ್ನೇ ಮೈಗೂಡಿಸಿಕೊಂಡಿರುವುದರಿಂದ ನಿಜವಾದ ಜಾತ್ಯತೀತರು ಬ್ರಾಹ್ಮಣರಾಗಿದ್ದಾರೆ ಎಂದರು. ಸರ್ಕಾರದಿಂದ ವಿಪ್ರ ಕುಟುಂಬಗಳಿಗೆ ಸಾಕಷ್ಟು ಯೋಜನೆಗಳನ್ನು ತರಲಾಗಿದೆ. ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಆರ್ಥಿಕವಾಗಿ ಹಿಂದುಳಿದವರಿಗಾಗಿ ಸ್ವಯಂ ಉದ್ಯೋಗ ಕೈಗೊಳ್ಳಲು 2 ಲಕ್ಷ ರೂಪಾಯಿ ನೇರ ಸಾಲ ಯೋಜನೆ, ಉನ್ನತ ಶಿಕ್ಷಣ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿರುವ ವಿದ್ಯಾರ್ಥಿಗಳಿಗೆ ತರಬೇತಿಗೆಂದು 1 ಲಕ್ಷ ರೂಪಾಯಿ ಸಹಾಯಧನ ಯೋಜನೆ, ಆಚಾರ್ಯತ್ರಯರ ಜಯಂತಿ ಆಚರಣೆಯ ಜೊತೆಗೆ ಸಾಧಕರಿಗೆ ಸನ್ಮಾನ.

ಮೆಡಿಕಲ್, ಎಂಜಿನಿಯರಿಂಗ್ ಸರ್ಕಾರಿ ಸೀಟು ಪಡೆದ ವಿದ್ಯಾರ್ಥಿಗಳಿಗೆ 1 ಲಕ್ಷ ಧನಸಹಾಯ ಯೋಜನೆ. ಸಾಂದಿಪಿನಿ ಯೋಜನೆ ಅಡಿ ಮಕ್ಕಳಿಗೆ ಶೈಕ್ಷಣಿಕ ವರ್ಷಕ್ಕೆ 15 ಸಾವಿರ ರೂಪಾಯಿ ಒದಗಿಸುವುದು ಸೇರಿದಂತೆ ಹಲವು ಯೋಜನೆಗಳು ಚಾಲನೆಯಲ್ಲಿವೆ. ಸಮಾಜದ ಸುಮಾರು 9 ಸಾವಿರ ಮಕ್ಕಳು, ಮಹಿಳೆಯರು, ಜನರು ಈಗಾಗಲೇ ಯಾವ ಮಧ್ಯವರ್ತಿಗಳ ಕಾಟವಿಲ್ಲದೆ ಯೋಜನೆಗಳ ಸದುಪಯೋಗ ಪಡೆದುಕೊಳ್ಳುತ್ತಿದ್ದಾರೆ ಎಂದರು. ಸಂಘದ ಸಂಸ್ಥಾಪಕ ಅಧ್ಯಕ್ಷ ಗುರುರಾಜ್ ಚಳ್ಳಾರಿ, ಅಧ್ಯಕ್ಷ ವಾದಿರಾಜ್ ಕುಲಕರ್ಣಿ, ಅಖಿಲ ಕರ್ನಾಟಕ ವಿಪ್ರ ಅಡುಗೆದಾರರ ಸಂಘದ ಅಧ್ಯಕ್ಷ ಕಲಬುರ್ಗಿಯ ಕೃಷ್ಣ ಕಾಡಮಗೇರಾ, , ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾಆ ಚುನಾಯಿತ ಜಿಲ್ಲಾ ಪ್ರತಿನಿಧಿ ಗುರುರಾಜ ಜೋಶಿ, ಉಪಾಧ್ಯಕ್ಷ ಪ್ರಾಣೇಶ ಮಾದಿನೂರ, ಕೃಷಣಮೂರ್ತಿ ಡಿ,ಮಂಗಳೂರು, ಗುರುರಾಜ್ ಜೋಶಿ, ರಮೇಶ ಜಹಗೀರದಾರ, ಶಂಕರ ಸೇವಾ ಸಮಿತಿಯ ಡಿ.ವಿ. ಜೋಷಿ, ವೆಂಕಟೇಶ ಕುಲಕರ್ಣಿ, ಸಾಕ್ಷಿ ತಿಕೋಟಿಕರ್, ರಾಘವೇಂದ್ರ, ಪಿ.ಕೆ.ಪುರೋಹಿತ್, ಉಪನ್ಯಾಸಕ ವಿಜಯಕುಮಾರ ಪದಕಿ, ಮಂಜುನಾಥ ಹಳ್ಳಿಕೇರಿ ಇದ್ದರು.

# ಶಿಲ್ಪಕಲೆಯ ಶ್ರೀಮಂತಿಕೆಗೆ ವಿಶ್ವಕರ್ಮರ ಕೊಡುಗೆ ಅಪಾರ: ಪಿ. ಸುಜ್ಞಾನಮೂರ್ತಿ

ಅ.ಶ. ಸುದ್ದಿ ಕೊಪ್ಪಳ




ಕೊಪ್ಪಳ: ಶಿಲ್ಪಕಲೆಯ ಶ್ರೀಮಂತಿಕೆಗೆ ವಿಶ್ವಕರ್ಮರ ಕೊಡುಗೆ ಅಪಾರವಾಗಿದೆ ಎಂದು ಕರ್ನಾಟಕ ರಾಜ್ಯದ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದ ರಾಜ್ಯಾಕ್ಷರಾದ ಪಿ.ಸುಜ್ಞಾನಮೂರ್ತಿ ಅವರು ಹೇಳಿದರು. ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕೊಪ್ಪಳ ನಗರಸಭೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಸಾಹಿತ್ಯ ಭವನದಲ್ಲಿ ಸೋಮವಾರ (ಸೆ. 21ರಂದು) ಆಯೋಜಿಸಲಾಗಿದ್ದ ಶ್ರೀ ವಿಶ್ವಕರ್ಮ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಅವರು ಮಾತನಾಡಿದರು. ವಿಶ್ವಕರ್ಮ ಸಮುದಾಯದ ಯುವಜನರು ಕೇವಲ ಸಾಂಪ್ರದಾಯಿಕ ಕುಲಕಸುಬಿಗೆ ಸೀಮಿತವಾಗದೆ ಆಧುನಿಕ ತಂತ್ರಜ್ಞಾನ, ಸಿಎನ್‌ಸಿ ಮಷಿನ್‌ಗಳು, ಡಿಜಿಟಲ್ ಹಾಗೂ ತಾಂತ್ರಿಕ ಕೌಶಲ್ಯಗಳನ್ನು ಅಳವಡಿಸಿಕೊಂಡು ಉದ್ಯಮಿಗಳಾಗಿ ಬೆಳೆಯಬೇಕು. ವಿಶ್ವಕರ್ಮ ಅಭಿವೃದ್ಧಿ ನಿಗಮದ ವತಿಯಿಂದ ಸಮುದಾಯದ ಅಭಿವೃದ್ಧಿಗಾಗಿ ಹಲವು ಯೋಜನೆಗಳನ್ನು ಜಾರಿಗೆ ತರಲಾಗಿದ್ದು, ನೇರ ಸಾಲ ಯೋಜನೆ ಅಡಿಯಲ್ಲಿ ಸಬ್ಸಿಡಿ ಸೌಲಭ್ಯಗಳು ಲಭ್ಯವಿವೆ. ಅರಿವು ಯೋಜನೆಯಡಿ ಸಿಇಟಿ ಹಾಗೂ ನೀಟ್ ಮೂಲಕ ಉನ್ನತ ಶಿಕ್ಷಣ ಇಂಜಿನಿಯರಿಂಗ್, ವೈದ್ಯಕೀಯ ಇತ್ಯಾದಿ ವ್ಯಾಸಂಗಕ್ಕೆ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ. 1 ಲಕ್ಷ ರೂಪಾಯಿಗಳವರೆಗೆ ರಿಯಾಯಿತಿ ಬಡ್ಡಿದರದಲ್ಲಿ ಸಾಲ ಸೌಲಭ್ಯ ಕಲ್ಪಿಸಲಾಗುತ್ತಿದೆ. ವಿದೇಶದಲ್ಲಿ ಉನ್ನತ ವ್ಯಾಸಂಗಕ್ಕೆ ಎಂಎಸ್/ಮಾಸ್ಟರ್ಸ್ ಮಾಡಲು ಇಚ್ಛಿಸುವ ಸಮುದಾಯದ ವಿದ್ಯಾರ್ಥಿಗಳಿಗೆ ರೂ. 50 ಲಕ್ಷದವರೆಗೆ ಬಡ್ಡಿ ರಹಿತ ಸಾಲ ಸೌಲಭ್ಯವಿದೆ. ಸುವರ್ಣ ಮಹೋತ್ಸವ ವಿದ್ಯಾರ್ಥಿವೇತನ ಯೋಜನೆಯಡಿ ಐಟಿಐ, ಜಿಟಿಟಿಸಿ ಹಾಗೂ ವುಡ್ ಟೆಕ್ನಾಲಜಿ ತರಬೇತಿ ಪಡೆಯುವ ವಿದ್ಯಾರ್ಥಿಗಳಿಗೆ ರೂ. 15,000 ವಿದ್ಯಾರ್ಥಿವೇತನ ನೀಡಲಾಗುತ್ತಿದೆ ಎಂದರು. ಗಂಗಾ ಕಲ್ಯಾಣ, ಸಾರಥಿ ಯೋಜನೆ ಹಾಗೂ ಕೇಂದ್ರ/ರಾಜ್ಯ ಸರ್ಕಾರದ ಪಿಎಂಇಜಿಪಿ, ಮುದ್ರಾ ಯೋಜನೆಗಳಡಿ ಸ್ವಂತ ಉದ್ಯಮ ಸ್ಥಾಪಿಸಲು ಸಿಎನ್‌ಸಿ, ಲೇಸರ್ ಯಂತ್ರೋಪಕರಣಗಳ ಬಳಕೆಗೆ ಬ್ಯಾಂಕ್‌ಗಳ ಮೂಲಕ ಆರ್ಥಿಕ ನೆರವು ಕಲ್ಪಿಸಲಾಗುವುದು. ನಿಗಮದ ಪ್ರಮುಖ ಯೋಜನೆಗಳಿಗೆ ಅರ್ಜಿ ಸಲ್ಲಿಸಲು ಸೆಪ್ಟೆಂಬರ್ 30 ಕೊನೆಯ ದಿನಾಂಕವಾಗಿದ್ದು, ಗ್ರಾಮ ಒನ್ ಅಥವಾ ಕರ್ನಾಟಕ ಒನ್ ಕೇಂದ್ರಗಳ ಮೂಲಕ ಸಾರ್ವಜನಿಕರು ಅರ್ಜಿ ಸಲ್ಲಿಸಿ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ತಿಳಿಸಿದರು.

ಕೊಪ್ಪಳ ಸಹಾಯಕ ಆಯುಕ್ತರಾದ ಮಹೇಬೂಬ್ ಜೀಲಾನ್ ಖುರೇಶಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಸಮಾಜಕ್ಕೆ ವಿಶ್ವಕರ್ಮ ಸಮುದಾಯದ ಕೊಡುಗೆ ಅನನ್ಯವಾಗಿದೆ. ಸಮಾಜದ ಶಾಂತಿ, ಸೌಹಾರ್ದತೆ ಮತ್ತು ಪ್ರತಿಯೊಬ್ಬರ ಏಳಿಗೆಗಾಗಿ ನಾವೆಲ್ಲರೂ ಒಗ್ಗಟ್ಟಿನಿಂದ ಶ್ರಮಿಸಬೇಕು ಎಂದು ಹೇಳಿದರು. ಕುಷ್ಟಗಿಯ ಶರಣ ಸಾಹಿತ್ಯ ಪರಿಷತ್ ತಾಲೂಕು ಘಟಕದ ಅಧ್ಯಕ್ಷರಾದ ನಟರಾಜ ಸೋನಾರ್ ಅವರು ವಿಶೇಷ ಉಪನ್ಯಾಸ ನೀಡಿ, ವಿಶ್ವಕರ್ಮರು ಜಗತ್ತಿನ ಸೃಷ್ಟಿಕರ್ತರಾಗಿದ್ದು, ಪುರಾಣ–ಇತಿಹಾಸಗಳಲ್ಲಿ ದೇವಾಲಯಗಳು, ಆಯುಧಗಳು, ವಿಮಾನಗಳು ಹಾಗೂ ಮಹಾನಗರಗಳನ್ನು ನಿರ್ಮಿಸಿದ ಶಿಲ್ಪಿಯಾಗಿದ್ದಾರೆ. ಅಜಂತಾ, ಎಲ್ಲೋರಾ, ಹಂಪಿ, ಬೇಲೂರು, ಹಳೇಬೀಡು ಮೊದಲಾದ ಐತಿಹಾಸಿಕ ತಾಣಗಳ ನಿರ್ಮಾಣದ ಹಿಂದೆ ವಿಶ್ವಕರ್ಮರ ಶ್ರಮವಿದೆ. ವಿಶ್ವಕರ್ಮ ಸಮುದಾಯವು ಪ್ರಾಚೀನ ಕಾಲದಿಂದಲೂ ಗುಣಮಟ್ಟ ಮತ್ತು ಕೌಶಲ್ಯಕ್ಕೆ ಹೆಸರಾಗಿದೆ. ಇಂದು ಸಮಾಜವು ಆಧುನಿಕತೆಗೆ ತೆರೆದುಕೊಂಡಿದ್ದರೂ ವಿಶ್ವಕರ್ಮರು ರೂಪಿಸಿದ ಕಲೆ ಮತ್ತು ವಿನ್ಯಾಸಗಳು ಇಂದಿಗೂ ಮಾದರಿಯಾಗಿವೆ ಎಂದು ವಿವರವಾಗಿ ಮಾತನಾಡಿದರು. ಕಾರ್ಯಕ್ರಮ ಸಾನಿಧ್ಯ ವಹಿಸಿದ್ದ ಶ್ರೀ ಸುಬ್ರಹ್ಮಣ್ಯ ಆಚಾರ್ಯರು ಮತ್ತು ಅಭಿನವ ಶ್ರೀಕಂಠ ಸ್ವಾಮಿಗಳು ಆಶೀರ್ವಚನ ನೀಡಿದರು. ಕಾರ್ಯಕ್ರಮದಲ್ಲಿ ವಿಶ್ವಕರ್ಮ ಸಮಾಜದ ಕೊಪ್ಪಳ ಜಿಲ್ಲಾಧ್ಯಕ್ಷರಾದ ನಾಗೇಶಕುಮಾರ ಕಂಸಾಳೆ, ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರಾದ ಕರಿಯಪ್ಪ, ತಾಲ್ಲೂಕಾಧಿಕಾರಿ ಪ್ರಭು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಾದ ಕರ್ಣಕುಮಾರ ಸೇರಿದಂತೆ ಹಲವು ಮುಖಂಡರು, ಮಹಿಳೆಯರು, ಯುವಕರು ಉಪಸ್ಥಿತರಿದ್ದರು. ಶ್ರೀಶೈಲ ಪತ್ತಾರ ಹಾಗೂ ತಂಡದವರು ವಂದೇ ಮಾತರಂ ಗೀತೆ, ನಾಡಗೀತೆ ಹಾಗೂ ವಿವಿಧ ಸಂಗೀತ ಗಾಯನಗಳನ್ನು ಪ್ರಸ್ತುತ ಪಡಿಸಿದರು. ಹನುಮಂತಪ್ಪ ಕುರಿ ಅವರು ಕಾರ್ಯಕ್ರಮ ನಿರೂಪಿಸಿದರು.

ಮೆರವಣಿಗೆ: ವೇದಿಕೆ ಕಾರ್ಯಕ್ರಮಕ್ಕೂ ಮೊದಲು ಶ್ರೀ ವಿಶ್ವಕರ್ಮರ ಭಾವಚಿತ್ರದ ಮೆರವಣಿಗೆಯೂ ಶ್ರೀ ಸಿರಸಪ್ಪಯ್ಯನ ಮಠದಿಂದ ಪ್ರಾರಂಭಗೊಂಡು ಗಡಿಯಾರ ಕಂಬ, ಜವಾಹರ ರಸ್ತೆಯ ಮೂಲಕ ಸಾಹಿತ್ಯ ಭವನದವರೆಗೆ ಅದ್ದೂರಿಯಾಗಿ ಜರುಗಿತು.

AJATHA SHATHRU KANNADA DAILY MORNING Editor, Printer, Publisher, & Owned by : PRADEEP KUMAR H.No. 2/77/1, Godi nilaya, Halli street, 1st ward,Mainahalli, Koppal-583238, Dist : Koppal- Karnataka Printed at : Goditechnologies, H.No. 2/77/1, Godi nilaya, Halli street, 1st ward,Mainahalli, Koppal-583238, Karnataka